Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್रಕಟಿತವಾಗಿದೆ.



| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खन्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |



## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible] ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs
(Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ಚಿತ್ರಣ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ್‌ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಅಧಿನಿಯಮ, 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕೀಟನಾಶಕ ಅಧಿನಿಯಮ, 1968

## (1968ರ ಅಧಿನಿಯಮ ಸಂಖ್ಯೆ 46)

[2ನೇ ಸೆಪ್ಟೆಂಬರ್ 1968]

ಮನುಷ್ಯ ಅಥವಾ ಪ್ರಾಣಿಗಳಿಗೆ ಅಪಾಯವನ್ನು ತಡೆಗಟ್ಟುವ ದೃಷ್ಟಿಯಿಂದ ಕೀಟನಾಶಕಗಳ ಆಮದು, ತಯಾರಿಕೆ, ಮಾರಾಟ, ಸಾಗಣೆ, ವಿತರಣೆ ಮತ್ತು ಉಪಯೋಗ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸಲು ಅಧಿನಿಯಮ.

ಭಾರತ ಗಣರಾಜ್ಯದ ಹತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮವಿಂತವಾಗತಕ್ಕದು :—

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :**—(1) ಈ ಅಧಿನಿಯಮವನ್ನು ಕೀಟನಾಶಕ ಅಧಿನಿಯಮ, 1968 ಎಂದು ಕರೆಯತಕ್ಕದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಇತರ ಕಾನೂನುಗಳ ಅನ್ವಯವು ನಿಷೇಧಿತವಲ್ಲ :**—ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಹೆಚ್ಚಿಗೆಯಾಗಿ ಮತ್ತು ಅದನ್ನು ಅಲ್ಪೀಕರಿಸದೆ ಇರತಕ್ಕದು.

**3. ಪರಿಭಾಷೆಗಳು :**—ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) ''ಪ್ರಾಣಿಗಳು'' ಎಂದರೆ ಮನುಷ್ಯರಿಗೆ ಉಪಯುಕ್ತವಾಗುವ ಪ್ರಾಣಿಗಳು ಮತ್ತು ವಿಹಂಗ ಮತ್ತು ಪಕ್ಷಿ ಮತ್ತು ಕೇಂದ್ರ ಸರ್ಕಾರವು, ಸರ್ಕಾರಿರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವ ಬಗೆಯ ವನ್ಯಜೀವಿಗಳನ್ನು ತನ್ನ ಅಭಿಪ್ರಾಯದಲ್ಲಿ ಸಂರಕ್ಷಿಸಬೇಕೆಂದು ಅಥವಾ ಕಾಪಾಡಬೇಕೆಂದು ಅಪೇಕ್ಷಿಸಬಹುದೋ ಅಂಥ ವನ್ಯಜೀವಿಗಳು ಒಳಗೊಳ್ಳುತ್ತವೆ ;

(ಖ) ''ಮಂಡಲಿ'' ಎಂದರೆ 4ನೇ ಪ್ರಕರಣದ ಮೇರೆಗೆ ರಚಿತವಾದ ಕೇಂದ್ರ ಕೀಟನಾಶಕ ಮಂಡಲಿ ;

(ಗ) ''ಕೇಂದ್ರ ಕೀಟನಾಶಕ ಪ್ರಯೋಗಾಲಯ'' ಎಂದರೆ 16ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರಯೋಗಾಲಯ ಅಥವಾ ಸಂದರ್ಭಾನುಸಾರ ನಿರ್ದಿಷ್ಟಪಡಿಸಿದ ಸಂಸ್ಥೆ ;

(ಘ) ''ಆಮದು'' ಎಂದರೆ ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಹೊರಗಿನ ಸ್ಥಳದಿಂದ ರಾಜ್ಯಕ್ಷೇತ್ರದೊಳಗಿನ ಯಾವುದೇ ಸ್ಥಳದೊಳಕ್ಕೆ ತರುವುದು ;

(ಙ) ''ಕೀಟನಾಶಕ'' ಎಂದರೆ—

(i) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಸ್ತು ; ಅಥವಾ

(ii) ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಅನುಸೂಚಿಯಲ್ಲಿ ಸೇರಿಸಬಹುದಾದಂಥ (ಶಿಲೀಂಧ್ರ ನಾಶಕಗಳು ಮತ್ತು ಕಳೆನಾಶಕಗಳು ಒಳಗೊಂಡಂತೆ) ಇತರ ವಸ್ತುಗಳು ; ಅಥವಾ

(iii) ಯಾವುದೇ ಅಂಥ ಒಂದು ಅಥವಾ ಹೆಚ್ಚು ವಸ್ತುಗಳನ್ನು ಒಳಗೊಂಡಿರುವ ಯಾವುದೇ ತಯಾರಿಕೆ ;

(ಚ) ''ಕೀಟನಾಶಕ ವಿಶ್ಲೇಷಕ'' ಎಂದರೆ 19ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕೀಟನಾಶಕ ವಿಶ್ಲೇಷಕ ;

(ಛ) ''ಕೀಟನಾಶಕ ಪರಿಶೀಲಕ'' ಎಂದರೆ 20ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕೀಟನಾಶಕ ಪರಿಶೀಲಕ ;

(ಜ) ''ಲೇಬಲ್'' ಎಂದರೆ ಪ್ರಥಮ ಪ್ಯಾಕೇಜಿನ ಮೇಲಿನ ಮತ್ತು ಪ್ಯಾಕೇಜನ್ನು ಇಡಲಾದ ಅಥವಾ ಪ್ಯಾಕು ಮಾಡಿದ ಇತರ ಪ್ರತಿಯೊಂದು ಹೊದಿಕೆಯ ಮೇಲೆ ಯಾವುದೇ ಬರಹದಲ್ಲಿನ ಮುದ್ರಿತ ಅಥವಾ ಚಿತ್ರಿತ ವಿಷಯ, ಮತ್ತು ಇದು ಕೀಟನಾಶಕದ ಜೊತೆಗಿರುವ ಯಾವುದೇ ಬರಹದಲ್ಲಿನ ಮುದ್ರಿತ ಅಥವಾ ಚಿತ್ರಿತ ವಿಷಯವನ್ನು ಒಳಗೊಳ್ಳುತ್ತದೆ ;

(ಝ) ''ಲೈಸೆನ್ಸು ಕೊಡುವ ಅಧಿಕಾರಿ'' ಎಂದರೆ 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ಲೈಸೆನ್ಸು ಕೊಡುವ ಅಧಿಕಾರಿ ;

(ಞ) ಯಾವುದೇ ಕೀಟನಾಶಕಕ್ಕೆ ಸಂಬಂಧಪಟ್ಟಂತೆ ''ತಯಾರಿಕೆ'' ಎಂಬುದರಲ್ಲಿ—

(i) ಕೀಟನಾಶಕದ ಮಾರಾಟ, ವಿತರಣೆ ಅಥವಾ ಉಪಯೋಗದ ದೃಷ್ಟಿಯಿಂದ ಯಾವುದೇ ಕೀಟನಾಶಕವನ್ನು ತಯಾರಿಸುವ, ಬದಲಾಯಿಸುವ, ಮುಗಿಸುವ, ಪ್ಯಾಕು ಮಾಡುವ, ಚೀಟಿ ಅಂಟಿಸುವ, ಒಡೆಯುವ ಅಥವಾ ಅನ್ಯಥಾ ಸಂಸ್ಕರಿಸುವ, ಸ್ವೀಕರಿಸುವ ಯಾವುದೇ ಕಾರ್ಯವಿಧಾನ ಅಥವಾ ಕಾರ್ಯವಿಧಾನದ ಭಾಗವು ಒಳಗೊಳ್ಳುತ್ತದೆ. ಆದರೆ ಚಿಲ್ಲರೆ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಯಾವುದೇ ಕೀಟನಾಶಕವನ್ನು ಪ್ಯಾಕು ಮಾಡುವುದು, ಒಡೆಯುವುದನ್ನು ಒಳಗೊಳ್ಳುವುದಿಲ್ಲ ; ಮತ್ತು

(ii) ಕೀಟನಾಶಕವನ್ನು ಒಳಗೊಂಡಿರುವ ತಯಾರಿಕೆಯನ್ನು ಯಾವ ಕಾರ್ಯವಿಧಾನದಿಂದ ರೂಪಿಸಲಾಗಿದೆಯೋ ಆ ಯಾವುದೇ ಕಾರ್ಯವಿಧಾನವನ್ನು ಒಳಗೊಳ್ಳುತ್ತದೆ;

(ಟ) "ತಪ್ಪಾಗಿ ಗುರುತು ಹಾಕಿದ" ಎಂದರೆ ಯಾವುದೇ ಕೀಟನಾಶಕವು,—

(i) ಅದಕ್ಕೆ ಸಂಬಂಧಿಸಿದ ಯಾವುದೇ ವಿವರಣೆ, ವಿನ್ಯಾಸ ಅಥವಾ ಚಿತ್ರಿತ ನಿರೂಪಣೆಯನ್ನು ಅದರ ಲೇಬಲ್ಲು ಒಳಗೊಂಡಿದ್ದು, ಅದು ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿದ್ದರೆ ಅಥವಾ ತಪ್ಪು ದಾರಿಗೆಳೆಯುವಂತಿದ್ದರೆ ಅಥವಾ ಅದರ ಪ್ಯಾಕೇಜು ಅದರ ಒಳಾಂಶಗಳಿಗೆ ಸಂಬಂಧಿಸಿದಂತೆ ಅನ್ಯಥಾ ಮೋಸಗೊಳಿಸುವಂತಿದ್ದರೆ ;

(ii) ಅದು. ಬೇರೊಂದು ಕೀಟನಾಶಕದ ಅನುಕರಣೆಯಾಗಿದ್ದರೆ ಅಥವಾ ಅದರ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದ್ದರೆ ; ಅಥವಾ

(iii) ಯಾವ ಮುನ್ನೆಚ್ಚರಿಕೆ ಅಥವಾ ಎಚ್ಚರಿಕೆಯು ಅವಶ್ಯ ಮತ್ತು ಸಾಕಷ್ಟೋ ಹಾಗೂ ಯಾವುದನ್ನು ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ಅಪಾಯವನ್ನು ತಡೆಗಟ್ಟಲು ಪಾಲಿಸತಕ್ಕದೋ ಆ ಯಾವುದೇ ಮುನ್ನೆಚ್ಚರಿಕೆ ಅಥವಾ ಎಚ್ಚರಿಕೆಯನ್ನು ಅದರ ಲೇಬಲ್ಲು ಒಳಗೊಂಡಿರದಿದ್ದರೆ ; ಅಥವಾ

(iv) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಲೇಬಲ್ಲಿನ ಮೇಲೆ ಕಾಣಿಸುವಂತೆ ಅಗತ್ಯಪಡಿಸಲಾದ ಯಾವುದೇ ಪದ, ನಿರೂಪಣೆ, ಅಥವಾ ಇತರ ಮಾಹಿತಿಯನ್ನು, ಅದರ ಮೇಲೆ ಇತರ ಪದಗಳನ್ನು, ನಿರೂಪಣೆಗಳನ್ನು, ವಿನ್ಯಾಸಗಳನ್ನು ಅಥವಾ ಚಿತ್ರಿತ ವಿಷಯವನ್ನು ಲೇಬಲ್ಲಿನ ಮೇಲೆ ಎದ್ದು ಕಾಣುವಂಥ ರೀತಿಯಲ್ಲಿ ಪ್ರದರ್ಶಿಸಿರುವಂತೆ, ಮತ್ತು ಖರೀದಿ ಮತ್ತು ಉಪಯೋಗದ ರೂಢಿಗತ ಷರತ್ತುಗಳ ಮೇರೆಗೆ ಯಾವನೇ ಸಾಮಾನ್ಯ ವ್ಯಕ್ತಿಯು ಓದುವ ಮತ್ತು ಅರ್ಥ ಮಾಡಿಕೊಳ್ಳುವ ಸಂಭವವಿರುವಂಥ ಭಾಷೆಯಲ್ಲಿ ಪ್ರದರ್ಶಿಸಿರದಿದ್ದರೆ ; ಅಥವಾ

(v) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾದಂತೆ ಅದನ್ನು ಪ್ಯಾಕು ಮಾಡಿರದಿದ್ದರೆ ಅಥವಾ ಲೇಬಲ್ಲು ಹಾಕಿರದಿದ್ದರೆ : ಅಥವಾ

(vi) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾದ ರೀತಿ ಅದನ್ನು ನೋಂದಾಯಿಸಿರದಿದ್ದರೆ : ಅಥವಾ

(vii) ಲೇಬಲ್ಲು, ಅದರ ನೋಂದಣಿ ಸಂಖ್ಯೆಯನ್ನಲ್ಲದೆ ಬೇರೆ ನೋಂದಣಿಗೆ ಯಾವುದೇ ಉಲ್ಲೇಖವನ್ನು ಒಳಗೊಂಡಿದ್ದರೆ ; ಅಥವಾ

(viii) ಕೀಟ ನಾಶಕವು ನಿಯಮಿಸಲಾದ ಮಟ್ಟಕ್ಕಿಂತ ಹೆಚ್ಚಿನ ವಿಷಾಂಶವನ್ನು ಹೊಂದಿದ್ದರೆ ಅಥವಾ ಅದರ ಸ್ವರೂಪ ಅಥವಾ ಗುಣವನ್ನು ಬದಲಾಯಿಸುವ ಹಾಗೆ ಯಾವುದೇ ವಸ್ತುವಿನೊಂದಿಗೆ ಮಿಶ್ರಣ ಮಾಡಿದ್ದರೆ ಅಥವಾ ಪ್ಯಾಕು ಮಾಡಿದ್ದರೆ ಅಥವಾ ನೋಂದಣಿಯಲ್ಲಿ ಸೇರಿರದಂಥ ಯಾವುದೇ ವಸ್ತುವನ್ನು ಒಳಗೊಂಡಿದ್ದರೆ,

—ಅದನ್ನು "ತಪ್ಪಾಗಿ ಗುರುತು ಹಾಕಲಾಗಿದೆ" ಎಂದು ಭಾವಿಸತಕ್ಕದು;

(ಠ) "ಪ್ಯಾಕೇಜು" ಎಂದರೆ ಕೀಟನಾಶಕವನ್ನು ಇಟ್ಟಿರುವ ಅಥವಾ ಪ್ಯಾಕು ಮಾಡಿರುವ ಪೆಟ್ಟಿಗೆ, ಸೀಸೆ, ಸಂಪುಟ, ಡಬ್ಬ, ಪೀಪಾಯಿ, ರಕ್ಷಾವರಣ, ಪಾತ್ರೆ, ಗೋಣಿಚೀಲ, ರಟ್ಟು ಅಥವಾ ಇತರ ವಸ್ತು ;

(ಡ) "ಆವರಣ" ಎಂದರೆ ಯಾವುದೇ ಕೀಟನಾಶಕವನ್ನು ಮಾರಾಟ ಮಾಡುವ ಅಥವಾ ತಯಾರಿಸುವ ಅಥವಾ ದಾಸ್ತಾನು ಮಾಡುವ ಅಥವಾ ಉಪಯೋಗಿಸುವ ಯಾವುದೇ ಭೂಮಿ, ಅಂಗಡಿ, ಮಳಿಗೆ ಅಥವಾ ಸ್ಥಳ ಮತ್ತು ಕೀಟನಾಶಕಗಳನ್ನು ಸಾಗಿಸುವ ಯಾವುದೇ ವಾಹನವು ಒಳಗೊಳ್ಳುತ್ತದೆ ;

(ಢ) "ನಿಯಮಿಸಿದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು;

(ಣ) ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ "ನೋಂದಾಯಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದುದು ;

(ತ) ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಗಳೊಂದಿಗೆ "ಮಾರಾಟ" ಎಂದರೆ ಯಾವುದೇ ಕೀಟನಾಶಕವನ್ನು ನಗದಾಗಿಯಾಗಲಿ ಅಥವಾ ಸಾಲವಾಗಿಯಾಗಲಿ ಮತ್ತು ಸಗಟಾಗಿಯಾಗಲಿ ಅಥವಾ ಚಿಲ್ಲರೆಯಾಗಿಯಾಗಲಿ ಮಾರಾಟ ಮಾಡುವುದು ಮತ್ತು ಯಾವುದೇ ಕೀಟನಾಶಕದ ಮಾರಾಟಕ್ಕಾಗಿ ಒಪ್ಪಂದ ಮಾಡಿಕೊಳ್ಳುವುದು, ಮಾರಾಟಕ್ಕಾಗಿ ಅದನ್ನು ಕೊಡ ಮಾಡುವುದು, ಮಾರಾಟಕ್ಕಾಗಿ ಇಡುವುದು ಅಥವಾ ಯಾವುದೇ ಸ್ವಾಧೀನದಲ್ಲಿ ಹೊಂದಿರುವುದನ್ನು ಒಳಗೊಳ್ಳುತ್ತದೆ ಮತ್ತು ಅಂಥ ಯಾವುದೇ ಕೀಟನಾಶಕವನ್ನು ಮಾರಾಟ ಮಾಡುವ ಪ್ರಯತ್ನವನ್ನೂ ಸಹ ಒಳಗೊಳ್ಳುತ್ತದೆ ;

(ಥ) ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ "ರಾಜ್ಯ ಸರ್ಕಾರ" ಎಂದರೆ ಅದರ ಆಡಳಿತಗಾರ ;

(ದ) "ಕೆಲಸಗಾರ" ಎಂದರೆ ಸೇವಾಕರಾರು ಅಥವಾ ಉಮೇದುವಾರಿಕೆ ಮೇರೆಗೆ ನಿಯೋಜಿತನಾದ ವ್ಯಕ್ತಿ.

4. ಕೇಂದ್ರ ಕೀಟನಾಶಕ ಮಂಡಲಿ :—(1) ಕೇಂದ್ರ ಸರ್ಕಾರವು, ಈ ಅಧಿನಿಯಮದ ನಿರ್ವಹಣೆಯಿಂದ ಉದ್ಭವಿಸುವ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಲು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮಂಡಲಿಗೆ ವಹಿಸಲಾದ ಇತರ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಆದಷ್ಟು ಬೇಗನೆ ಕೇಂದ್ರ ಕೀಟನಾಶಕ ಮಂಡಲಿ ಎಂದು ಕರೆಯುವ ಒಂದು ಮಂಡಲಿಯನ್ನು ರಚಿಸತಕ್ಕದು.

(2) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ಸಲಹೆ ನೀಡಬಹುದಾದ ವಿಷಯಗಳಲ್ಲಿ—

(ಕ) ಕೀಟನಾಶಕಗಳನ್ನು ಉಪಯೋಗಿಸುವಲ್ಲಿ ಮನುಷ್ಯ ಅಥವಾ ಪ್ರಾಣಿಗಳಿಗೆ ಉಂಟಾಗುವ ಅಪಾಯ ಮತ್ತು ಅಂಥ ಅಪಾಯವನ್ನು ಪ್ರತಿಬಂಧಿಸಲು ಅವಶ್ಯವಾದ ಸುರಕ್ಷತಾ ಕ್ರಮಗಳು ;

(ಖ) ಮನುಷ್ಯ ಅಥವಾ ಪ್ರಾಣಿಗಳ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಕೀಟನಾಶಕಗಳ ತಯಾರಿಕೆ, ಮಾರಾಟ, ದಾಸ್ತಾನು, ಸಾಗಣೆ ಮತ್ತು ವಿತರಣೆ.

—ಇವುಗಳಿಗೆ ಸಂಬಂಧಪಟ್ಟ ವಿಷಯಗಳೂ ಒಳಗೊಳ್ಳತಕ್ಕದು.

(3) ಮಂಡಲಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಅಂದರೆ :—

(i) ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶಕ, ಪದನಿಮಿತ್ತ, ಅಧ್ಯಕ್ಷನಾಗಿರತಕ್ಕುದು;

(ii) ಭಾರತದ ಔಷಧಿ ನಿಯಂತ್ರಕ, ಪದನಿಮಿತ್ತ ;

(iii) ಭಾರತ ಸರ್ಕಾರದ ಸಸ್ಯ ಸಂರಕ್ಷಣಾ ಸಲಹೆಗಾರ, ಪದನಿಮಿತ್ತ ;

(iv) ಆಹಾರ, ಕೃಷಿ, ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಸಚಿವಾಲಯದ (ಆಹಾರ ಇಲಾಖೆ) ದಾಸ್ತಾನು ಮತ್ತು ಪರಿಶೀಲನಾ ನಿರ್ದೇಶಕ, ಪದನಿಮಿತ್ತ ;

(v) ಕಾರ್ಖಾನೆಗಳ ಮುಖ್ಯ ಸಲಹೆಗಾರ, ಪದನಿಮಿತ್ತ;

(vi) ನಿರ್ದೇಶಕ, ಸೋಂಕು ರೋಗಗಳ ರಾಷ್ಟ್ರೀಯ ಸಂಸ್ಥೆ, ಪದನಿಮಿತ್ತ ;

(vii) ಮಹಾ ನಿರ್ದೇಶಕ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ಪದನಿಮಿತ್ತ ;

(viii) ಮಹಾ ನಿರ್ದೇಶಕ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು, ಪದನಿಮಿತ್ತ

(ix) ನಿರ್ದೇಶಕ, ಭಾರತದ ಪ್ರಾಣಿ ವಿಜ್ಞಾನ ಸಮೀಕ್ಷೆ, ಪದನಿಮಿತ್ತ ;

(x) ಮಹಾ ನಿರ್ದೇಶಕ, ಭಾರತೀಯ ಮಾನಕಗಳ ಸಂಸ್ಥೆ, ಪದನಿಮಿತ್ತ ;

(xi) ಸಾರಿಗೆ ಮತ್ತು ನೌಕಾಯಾನ ಸಚಿವಾಲಯ ನೌಕಾಯಾನದ ಮಹಾನಿರ್ದೇಶಕ ಅಥವಾ ಅವನ ಗೈರು-ಹಾಜರಿಯಲ್ಲಿ ನೌಕಾಯಾನದ ಉಪಮಹಾನಿರ್ದೇಶಕ, ಪದನಿಮಿತ್ತ;

(xii) ಜಂಟಿ ನಿರ್ದೇಶಕ, ರೈಲ್ವೆ ಸಚಿವಾಲಯ (ರೈಲ್ವೆ ಮಂಡಲಿ) ಸಂಚಾರ (ಸಾಮಾನ್ಯ), ಪದನಿಮಿತ್ತ ;

(xiii) ಕಾರ್ಯದರ್ಶಿ, ಆಹಾರ ಗುಣಮಟ್ಟಗಳ ಕೇಂದ್ರ ಸಮಿತಿ, ಪದನಿಮಿತ್ತ;

(xiiiಕ) ಪಶು ಸಂಗೋಪನಾ ಕಮಿಷನರ್, ಕೃಷಿ ಇಲಾಖೆ, ಪದನಿಮಿತ್ತ;

(xiiiಖ) ಜಂಟಿ ಕಮಿಷನರ್ (ಮೀನುಗಾರಿಕೆ), ಕೃಷಿ ಇಲಾಖೆ, ಪದನಿಮಿತ್ತ;

(xiiiಗ) ಅರಣ್ಯಗಳ ಉಪ ಮಹಾ ಪರಿಶೀಲಕ (ವನ್ಯಜೀವಿ), ಕೃಷಿ ಇಲಾಖೆ, ಪದನಿಮಿತ್ತ;

(xiiiಘ) ಕೈಗಾರಿಕಾ ಸಲಹೆಗಾರ (ರಾಸಾಯನಿಕಗಳು), ತಾಂತ್ರಿಕ ಅಭಿವೃದ್ಧಿ ಮಹಾನಿರ್ದೇಶನಾಲಯ, ಪದನಿಮಿತ್ತ;

(xiv) ಪೆಟ್ರೋಲಿಯಂ ಮತ್ತು ರಾಸಾಯನಿಕಗಳ ಸಚಿವಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ;

(xv) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಔಷಧ ಶಾಸ್ತ್ರಜ್ಞ;

(xvi) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ವೈದ್ಯಕೀಯ ವಿಷ ಶಾಸ್ತ್ರಜ್ಞ;

(xvii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ರಾಜ್ಯದಲ್ಲಿ ಜನಾರೋಗ್ಯ ಕಾರ್ಯದಲ್ಲಿ ವ್ಯವಹರಿಸುವ ಇಲಾಖೆಯ ಪ್ರಭಾರದಲ್ಲಿರತಕ್ಕ ಒಬ್ಬ ವ್ಯಕ್ತಿ;

(xviii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ರಾಜ್ಯಗಳಲ್ಲಿ ಕೃಷಿ ನಿರ್ದೇಶಕರುಗಳಾಗಿರತಕ್ಕ ಇಬ್ಬರು ವ್ಯಕ್ತಿಗಳು;

(xix) ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ನಾಲ್ಕು ವ್ಯಕ್ತಿಗಳು, ಅವರಲ್ಲಿ ಒಬ್ಬನು ಔದ್ಯಮಿಕ ಸ್ವಾಸ್ಥ್ಯ ಮತ್ತು ವೃತ್ತಿ ಅಪಾಯಗಳ ತಜ್ಞನಾಗಿರತಕ್ಕುದು;

(xx) ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತನಾಗುವ ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಪರಿಷತ್ತನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ;

(xxi) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಜೀವ ಪರಿಸರ ಶಾಸ್ತ್ರಜ್ಞ.

(4) (3)ನೇ ಉಪಪ್ರಕರಣದ (xiv) ರಿಂದ (xxi) ವರೆಗಿನ ಖಂಡಗಳ ಮೇರೆಗೆ ನಾಮನಿರ್ದೇಶಿತರಾದ ವ್ಯಕ್ತಿಗಳನ್ನು ರಾಜೀನಾಮೆಯ, ಮರಣದ ಮೂಲಕ ಅಥವಾ ಅನ್ಯಥಾ ಮುಂಚಿತವಾಗಿ ಅವರ ಸ್ಥಾನಗಳು ಖಾಲಿಯಾದ ಹೊರತು, ಅವರನ್ನು ನಾಮನಿರ್ದೇಶನ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿರತಕ್ಕುದು, ಆದರೆ ಪುನರ್ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕುದು:

ಪರಂತು, (xvii) ಮತ್ತು (xviii) ನೇ ಖಂಡಗಳ ಮೇರೆಗೆ ನಾಮನಿರ್ದೇಶಿತರಾದ ವ್ಯಕ್ತಿಗಳು, ಯಾವ ನೇಮಕಾತಿಯ ಕಾರಣದಿಂದಾಗಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆಯೋ ಆ ಕಾರಣದಿಂದಾಗಿ ಅವರು ನೇಮಕಾತಿಗಳನ್ನು ಧಾರಣ ಮಾಡಿರುವಷ್ಟರವರೆಗೆ ಮಾತ್ರ ಪದಧಾರಣ ಮಾಡಿರತಕ್ಕುದು.

(5) ಮಂಡಳಿ, ನೋಂದಣಿ ಸಮಿತಿಯ ಅಥವಾ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಸಂದರ್ಭಾನುಸಾರ, ಮಂಡಲಿ, ನೋಂದಣಿ ಸಮಿತಿ ಅಥವಾ ಅಂಥ ಸಮಿತಿಯಲ್ಲಿ ಯಾವುದೇ ಖಾಲಿಸ್ಥಾನವು ಅಸ್ತಿತ್ವದಲ್ಲಿದೆಯೆಂಬ ಅಥವಾ ಅವುಗಳ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣ-ಮಾತ್ರದಿಂದ ಪ್ರಶ್ನಿಸತಕ್ಕುದಲ್ಲ.

**5. ನೋಂದಣಿ ಸಮಿತಿ :** (1) ಕೇಂದ್ರ ಸರ್ಕಾರವು ಒಬ್ಬ ಅಧ್ಯಕ್ಷ ಮತ್ತು ಮಂಡಲಿಯ ಸದಸ್ಯರಾಗಿರತಕ್ಕ ಐವರಿಗಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡ (ಭಾರತದ ಔಷಧಿ ನಿಯಂತ್ರಕ ಮತ್ತು ಭಾರತ ಸರ್ಕಾರದ ಸಸ್ಯ ಸಂರಕ್ಷಣಾ ಸಲಹೆಗಾರರನ್ನೂ ಒಳಗೊಂಡು)–

(i) ಕೀಟ ನಾಶಕಗಳನ್ನು, ಅವುಗಳಿಗೆ ಸಂಬಂಧಿಸಿದ ಸೂತ್ರಗಳನ್ನು ಪರಿಶೀಲಿಸಿದ ನಂತರ ಮತ್ತು ಅವುಗಳ ಪ್ರಭಾವ ಹಾಗೂ ಮನುಷ್ಯರು ಮತ್ತು ಪ್ರಾಣಿಗಳ ಸುರಕ್ಷತೆಗೆ ಸಂಬಂಧಿಸಿದಂತೆ ಸಂದರ್ಭಾನುಸಾರ, ಆಮದುದಾರ ಅಥವಾ ತಯಾರಕನು ಮಾಡಿದ ಕ್ಲೇಮುಗಳನ್ನು ಪರೀಕ್ಷಿಸಿದ ತರುವಾಯ ನೋಂದಾಯಿಸಲು; ಮತ್ತು

(ii) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ವಹಿಸಲಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸಲು,

– ಒಂದು ನೋಂದಣಿ ಸಮಿತಿಯನ್ನು ರಚಿಸತಕ್ಕದ್ದು.

(2) ಅಧ್ಯಕ್ಷನು, ಮಂಡಲಿಯ ಸದಸ್ಯನಾಗಿಲ್ಲದಿರುವಲ್ಲಿ, ಅವನ ಅಧಿಕಾರಾವಧಿ ಮತ್ತು ಸೇವೆಯ ಇತರ ಷರತ್ತುಗಳು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನೋಂದಣಿ ಸಮಿತಿಯ ಸದಸ್ಯನು, ಅವನು ಎಲ್ಲಿಯ ವರೆಗೆ ಮಂಡಲಿಯ ಸದಸ್ಯನಾಗಿರುವನೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ಸಮಿತಿಯು, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ತಜ್ಞರನ್ನು ಅಂಥ ಉದ್ದೇಶ ಅಥವಾ ಅವಧಿಯವರೆಗೆ ಸಹಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು ; ಆದರೆ ಹಾಗೆ ಸಹಸದಸ್ಯನನ್ನಾಗಿ ಸೇರಿಸಿಕೊಳ್ಳಲಾದ ಯಾವನೇ ತಜ್ಞನು ಮತ ನೀಡುವ ಹಕ್ಕನ್ನು ಹೊಂದಿರತಕ್ಕದಲ್ಲ.

(5) ನೋಂದಣಿ ಸಮಿತಿಯು, ತನ್ನದೇ ಆದ ಪ್ರಕ್ರಿಯೆಯನ್ನು ಮತ್ತು ತಾನು ನಡೆಸಬೇಕಾದ ವ್ಯವಹಾರ ನಡವಳಿಕೆಯನ್ನು ವಿನಿಯಮಿಸತಕ್ಕದ್ದು.

**6. ಇತರ ಸಮಿತಿಗಳು:**–ಮಂಡಲಿಯು, ತಾನು ಸೂಕ್ತವೆಂದು ಭಾವಿಸುವಂಥ ಸಮಿತಿಗಳನ್ನು ನೇಮಿಸಬಹುದು ಮತ್ತು ಮಂಡಲಿಯು ವಿಧಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ, ಆ ಷರತ್ತುಗಳಿಗೆ ಒಳಪಟ್ಟು, ಮಂಡಲಿಯು ಆ ಸಮಿತಿಗಳಿಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸಲು ಮಂಡಲಿಯ ಸದಸ್ಯರುಗಳಲ್ಲದ ವ್ಯಕ್ತಿಗಳನ್ನು ಅವುಗಳಿಗೆ ನೇಮಕ ಮಾಡಬಹುದು.

**7. ಮಂಡಲಿಗಾಗಿ ಪ್ರಕ್ರಿಯೆ:**—ಮಂಡಲಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ತನ್ನ ಸ್ವಂತ ಪ್ರಕ್ರಿಯೆಯನ್ನು ಮತ್ತು ಅದರ ಯಾವುದೇ ಸಮಿತಿಯ ಪ್ರಕ್ರಿಯೆಯನ್ನು ಮತ್ತು ತಾನು ಅಥವಾ ಅಂಥ ಸಮಿತಿಗಳ ಮೂಲಕ ನಡೆಸಬೇಕಾದ ವ್ಯವಹಾರ ನಡವಳಿಕೆಗಳನ್ನು ವಿನಿಯಮಿಸುವ ಉದ್ದೇಶಕ್ಕಾಗಿ ಉಪವಿಧಿಗಳನ್ನು ರಚಿಸಬಹುದು.

**8. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು:**–ಕೇಂದ್ರ ಸರ್ಕಾರವು,–

(i) ಮಂಡಲಿಯ ಕಾರ್ಯದರ್ಶಿಯಾಗಿ ಒಬ್ಬ ವ್ಯಕ್ತಿಯನ್ನು ನೇಮಿಸತಕ್ಕದ್ದು, ಅವನು ನೋಂದಣಿ ಸಮಿತಿಯ ಕಾರ್ಯದರ್ಶಿಯಾಗಿ ಸಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು; ಮತ್ತು

(ii) ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸುವಂಥ ತಾಂತ್ರಿಕ ಮತ್ತು ಇತರ ಸಿಬ್ಬಂದಿಯನ್ನು ಮಂಡಲಿ ಮತ್ತು ನೋಂದಣಿ ಸಮಿತಿಗೆ ಒದಗಿಸತಕ್ಕದ್ದು.

**9. ಕೀಟ ನಾಶಕಗಳ ನೋಂದಣಿ:**–(1) ಯಾವುದೇ ಕೀಟ ನಾಶಕವನ್ನು ಆಮದು ಮಾಡಿಕೊಳ್ಳಲು ಅಥವಾ ತಯಾರಿಸಲು ಇಷ್ಟ ಪಡುವ ಯಾವನೇ ವ್ಯಕ್ತಿಯು, ಅಂಥ ಕೀಟ ನಾಶಕದ ನೋಂದಣಿಗಾಗಿ ನೋಂದಣಿ ಸಮಿತಿಗೆ ಅರ್ಜಿ ಸಲ್ಲಿಸಬಹುದು ಮತ್ತು ಅಂಥ ಪ್ರತಿಯೊಂದು ಕೀಟನಾಶಕಕ್ಕಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು:

ಪರಂತು, ಈ ಪ್ರಕರಣದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ಕೀಟನಾಶಕದ ಆಮದು ಅಥವಾ ತಯಾರಿಕೆ ವ್ಯವಹಾರದಲ್ಲಿ ತೊಡಗಿರುವ ಯಾವನೇ ವ್ಯಕ್ತಿಯು ಅಂಥ ಪ್ರಾರಂಭದ ದಿನಾಂಕದಿಂದ ಹದಿನೇಳು ತಿಂಗಳ ಅವಧಿಯೊಳಗೆ ನೋಂದಣಿ ಸಮಿತಿಗೆ, ಅವನು, ಆ ದಿನಾಂಕಕ್ಕೆ ಮುಂಚೆ ಆಮದು ಮಾಡಿಕೊಳ್ಳುತ್ತಿರುವ ಅಥವಾ ತಯಾರಿಸುತ್ತಿರುವ ಯಾವುದೇ ಕೀಟ ನಾಶಕದ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಮತ್ತೂ ಪರಂತು, ಹಿಂದಿನ ಪರಂತುಕದಲ್ಲಿ ಉಲ್ಲೇಖಿಸಿದ ಯಾವನೇ ವ್ಯಕ್ತಿಯು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಪರಂತುಕದ ಮೇರೆಗೆ ಅರ್ಜಿಯನ್ನು ಸಲ್ಲಿಸಲು ತಪ್ಪಿದರೆ, ಪ್ರತಿಯೊಂದು ಅಂಥ ಕೀಟನಾಶಕದ ನೋಂದಣಿಗಾಗಿನ ಅಂಥ ಅವಧಿಯು ಮುಕ್ತಾಯವಾದ ತರುವಾಯ, ಅವನು, ಆ ತರುವಾಯ ಯಾವುದೇ ಕಾಲದಲ್ಲಿ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕೆ ಒಂದು ನೂರು ರೂಪಾಯಿಗಳ ದಂಡವನ್ನು ಸಂದಾಯ ಮಾಡಿ, ಅಂಥ ಅರ್ಜಿಯನ್ನು ಸಲ್ಲಿಸಬಹುದು:

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ಕೀಟನಾಶಕದ ನೋಂದಣಿಗಾಗಿ ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಸಮಿತಿಯು, ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಕೀಟನಾಶಕದ ಪ್ರಭಾವ ಮತ್ತು ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಅದರ ಸುರಕ್ಷತೆಯ ಬಗ್ಗೆ ಸಂದರ್ಭಾನುಸಾರ, ಆಮದುದಾರ ಅಥವಾ ತಯಾರಕನು ಮಾಡಿದ ಕ್ಲೇಮುಗಳಿಗೆ ಯಾವ ಕೀಟನಾಶಕಕ್ಕೆ ಅರ್ಜಿಯು ಸಂಬಂಧಪಟ್ಟಿದೆಯೋ, ಆ ಅರ್ಜಿಗೆ ಅನುಸಾರವಾಗಿದೆ ಎಂದು ಅದು ಮನದಟ್ಟು ಮಾಡಿಕೊಂಡ ತರುವಾಯ, ಅದು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳ ಮೇಲೆ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ತರುವಾಯ ಕೀಟ ನಾಶಕವನ್ನು ನೋಂದಣಿ ಮಾಡಬಹುದು. ಅದಕ್ಕೆ ಒಂದು ನೋಂದಣಿ ಸಂಖ್ಯೆಯನ್ನು ಮಂಜೂರು ಮಾಡತಕ್ಕದ್ದು ಮತ್ತು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿಯೊಳಗೆ, ನೋಂದಣಿಯ ಸಂಕೇತವಾಗಿ ಒಂದು ಪ್ರಮಾಣ ಪತ್ರವನ್ನು ಕೊಡತಕ್ಕದ್ದು:

ಪರಂತು, ಸಮಿತಿಯು ತನ್ನ ಮುಂದೆ ಇಟ್ಟ ಸಾಮಗ್ರಿಗಳ ಆಧಾರದ ಮೇಲೆ ಸದರಿ ಅವಧಿಯೊಳಗೆ, ಒಂದು ತೀರ್ಮಾನಕ್ಕೆ ಬರಲು ಅಸಮರ್ಥವಾದರೆ, ಆ ಅವಧಿಯನ್ನು ಆರು ತಿಂಗಳುಗಳಿಗೆ ಮೀರದಂತೆ ಇನ್ನೂ ಹೆಚ್ಚಿನ ಅವಧಿಗೆ ವಿಸ್ತರಿಸತಕ್ಕದು :

ಮತ್ತೂ ಪರಂತು, ಮನುಷ್ಯರು ಅಥವಾ ಪ್ರಾಣಿಗಳಿಗೆ ಸಂರಕ್ಷತೆಯನ್ನು ಸುನಿಶ್ಚಿತಗೊಳಿಸಲು ಸಾಕಷ್ಟಾಗಿರುವುದೆಂದು ಅರ್ಜಿದಾರನು ಕ್ಲೇಮು ಮಾಡಿರುವ ಮುಂಜಾಗ್ರತೆ ಕ್ರಮಗಳು ಸುಲಭವಾಗಿ ಪಾಲಿಸಲು ಆಗದಂಥವುಗಳೆಂದು ಅಥವಾ ಅಂಥ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿದ್ದಾಗ್ಯೂ, ಆ ಕೀಟನಾಶಕದ ಉಪಯೋಗವು ಮನುಷ್ಯರು ಅಥವಾ ಪ್ರಾಣಿಗಳಿಗೆ ತೀವ್ರ ಅಪಾಯವನ್ನು ಉಂಟು ಮಾಡುತ್ತದೆ ಎಂದು ಸಮಿತಿಯು ಅಭಿಪ್ರಾಯಪಟ್ಟರೆ, ಅದು ಕೀಟನಾಶಕದ ನೋಂದಣಿಯನ್ನು ತಿರಸ್ಕರಿಸಬಹುದು.

(3ಕ) ಅದು, 1975ರ ಮಾರ್ಚಿ 31ನೇ ದಿನಕ್ಕೆ ಮುಂಚೆ ಅರ್ಜಿಯನ್ನು ಸ್ವೀಕರಿಸಿದ್ದ ಸಂದರ್ಭದಲ್ಲಿ, ಅಂಥ ಅರ್ಜಿಗಳನ್ನು ವಿಲೆ ಮಾಡುವುದಕ್ಕೆ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗಿದ್ದಾಗ್ಯೂ, ಅಂಥ ಮುಕ್ತಾಯದ ತರುವಾಯ, ಆದರೆ 1977ರ ಕೀಟ ನಾಶಕಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಯೊಳಗೆ, ಯಾವುದೇ ಕಾಲದಲ್ಲಿ ನೋಂದಣಿ ಸಮಿತಿಯು, ಅಂಥ ಅರ್ಜಿಗಳನ್ನು ವಿಲೆ ಮಾಡುವುದು ಕಾನೂನು ಬದ್ಧವಾಗಿರತಕ್ಕದು ಮತ್ತು ಯಾವಾಗಲೂ ಕಾನೂನುಬದ್ಧವಾಗಿತ್ತೆಂದು ಭಾವಿಸತಕ್ಕದು:

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, 1977ರ ಕೀಟನಾಶಕಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ಮೊದಲು, ಅಂಥ ಪ್ರಾರಂಭಕ್ಕೆ ಮುಂಚೆ ಮಂಜೂರು ಮಾಡಿದ ನೋಂದಣಿ ಪ್ರಮಾಣ ಪತ್ರದ ಷರತ್ತುಗಳ ಯಾವುದೇ ಉಲ್ಲಂಘನೆಯನ್ನು, ಈ ಅಧಿನಿಯಮದ ಮೇರೆಗೆ ದಂಡನೀಯ ಅಪರಾಧವೆಂದು ಭಾವಿಸತಕ್ಕದಲ್ಲ.

(3ಖ) ನೋಂದಣಿ ಸಮಿತಿಯು, ಕೀಟ ನಾಶಕವನ್ನು ಭಾರತದಲ್ಲಿ ಮೊದಲ ಬಾರಿಗೆ ಬಳಕೆಗೆ ತರಲಾಗುತ್ತಿದೆ ಎಂದು ಅಭಿಪ್ರಾಯ ಪಡುವಲ್ಲಿ, ಅದು ವಿಚಾರಣೆಯಾಗುವವರೆಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳ ಮೇಲೆ ಎರಡು ವರ್ಷಗಳ ಅವಧಿಯವರೆಗೆ ಅದನ್ನು ತಾತ್ಕಾಲಿಕವಾಗಿ ನೋಂದಣಿ ಮಾಡಬಹುದು.

(3ಗ) ನೋಂದಣಿ ಸಮಿತಿಯು, ಕೀಟನಾಶಕದ ಪ್ರಭಾವ ಮತ್ತು ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಅದರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಯಾವ ಷರತ್ತುಗಳ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಲಾಗಿದೆಯೋ, ಆ ಷರತ್ತುಗಳನ್ನು ವ್ಯತ್ಯಸ್ತಗೊಳಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಪ್ರಮಾಣಪತ್ರಧಾರಕನಿಗೆ ಬರಹದಲ್ಲಿನ ನೋಟೀಸಿನ ಮೂಲಕ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದಲ್ಲಿ ಪ್ರಮಾಣ ಪತ್ರವನ್ನು ಒಪ್ಪಿಸಿಬಿಡುವಂತೆ ಅಗತ್ಯಪಡಿಸಬಹುದು.

(4) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ, ಕೀಟನಾಶಕವು ನೋಂದಣಿಯಾಗಿರುವಲ್ಲಿ, ಕೀಟನಾಶಕವನ್ನು ಆಮದು ಮಾಡಿಕೊಳ್ಳಲು ಅಥವಾ ತಯಾರಿಸಲು ಅಥವಾ ಅದನ್ನು ಆಮದು ಮಾಡಿಕೊಳ್ಳುವ ಅಥವಾ ತಯಾರಿಸುವ ವ್ಯವಹಾರದಲ್ಲಿ ತೊಡಗಿರುವ ಯಾವನೇ ಇತರ ವ್ಯಕ್ತಿಯು ಇಷ್ಟಪಟ್ಟಲ್ಲಿ, ಅವನು ಅರ್ಜಿ ಸಲ್ಲಿಸಿದ ಮೇಲೆ ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ತರುವಾಯ ಅವನಿಗೆ ಒಂದು ನೋಂದಣಿ ಸಂಖ್ಯೆಯನ್ನು ಮಂಜೂರು ಮಾಡತಕ್ಕದು ಮತ್ತು ಅದಕ್ಕೆ ಸಂಬಂಧಿಸಿದಂತೆ ಕೀಟನಾಶಕವನ್ನು ಮೂಲತ: ಯಾವ ಷರತ್ತುಗಳ ಮೇಲೆ ನೋಂದಣಿ ಮಾಡಲಾಗಿತ್ತೋ ಅವೇ ಷರತ್ತುಗಳ ಮೇಲೆ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡತಕ್ಕದು.

**10. ನೋಂದಣಿ ಮಾಡದಿರುವುದರ ಅಥವಾ ರದ್ದುಪಡಿಸುವುದರ ವಿರುದ್ಧ ಅಪೀಲು** :—9ನೇ ಪ್ರಕರಣದ ಮೇರೆಗೆ, ನೋಂದಣಿ ಸಮಿತಿಯ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ತೀರ್ಮಾನವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ, ನಿಯಮಿಸಿದ ರೀತಿಯಲ್ಲಿ ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಬಹುದು ಮತ್ತು ಅದರ ಮೇಲಿನ ತೀರ್ಮಾನವು ಅಂತಿಮವಾಗಿರತಕ್ಕದು:

ಪರಂತು, ಕೇಂದ್ರ ಸರ್ಕಾರವು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಹೂಡಲು ಸಾಕಷ್ಟು ಕಾರಣಗಳಿಂದ ಅವನು ಪ್ರತಿಬಂಧಿತನಾಗಿದ್ದನೆಂದು ಅದಕ್ಕೆ ಮನದಟ್ಟಾದರೆ, ಸದರಿ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

**11. ಕೇಂದ್ರ ಸಕಾರದ ಪುನರೀಕ್ಷಣಾಧಿಕಾರ** :—ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ 9ನೇ ಪ್ರಕರಣದ ಮೇರೆಗೆ ನೋಂದಣಿ ಸಮಿತಿಯು ತೀರ್ಮಾನವನ್ನು ಕೊಟ್ಟ ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಯನ್ನು, ಯಾವುದೇ ಅಂಥ ತೀರ್ಮಾನದ ಕಾನೂನು ಸಕ್ಷಮತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳಲು ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ತಾನು ಯೋಗ್ಯವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು, ತೀರ್ಮಾನವನ್ನು ಮಾಡಿದ ದಿನಾಂಕದಿಂದ ಒಂದು ವರ್ಷದ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು, ಯಾವನೇ ವ್ಯಕ್ತಿಗೆ ಉದ್ದೇಶಿತ ಆದೇಶದ ವಿರುದ್ಧ ಕಾರಣ ತೋರಿಸಲು ಸೂಕ್ತ ಅವಕಾಶ ಕೊಟ್ಟ ಹೊರತು ಪ್ರತಿಕೂಲವಾದ ಯಾವುದೇ ಆದೇಶವನ್ನು, ಮಾಡತಕ್ಕದಲ್ಲ.

**12. ಲೈಸೆನ್ಸು ಕೊಡುವ ಅಧಿಕಾರಿಗಳು**:—ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಅದು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಲೈಸೆನ್ಸು ಕೊಡುವ ಅಧಿಕಾರಿಗಳಾಗಿ ನೇಮಿಸಬಹುದು ಮತ್ತು ಯಾವ ಪ್ರದೇಶಗಳಿಗೆ ಸಂಬಂಧಿಸಿದಂತೆ ಅವರು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬೇಕೋ, ಆ ಯಾವುವೇ ಪ್ರದೇಶಗಳನ್ನು ನಿರ್ಧರಿಸಬಹುದು.

**13. ಲೈಸೆನ್ಸಿನ ಮಂಜೂರಾತಿ.--**(1) ಯಾವುದೇ ಕೀಟ ನಾಶಕವನ್ನು ತಯಾರಿಸಲು ಅಥವಾ ಮಾರಾಟ ಮಾಡಲು, ದಾಸ್ತಾನು ಮಾಡಲು ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಲು ಅಥವಾ ವಿತರಣೆ ಮಾಡಲು ಅಥವಾ ಯಾವುದೇ ಕೀಟ ನಾಶಕವನ್ನು ಉಪಯೋಗಿಸಿ ವಿನಾಶಕಾರೀ ಕೀಟಗಳ ನಿಯಂತ್ರಣ ಕಾರ್ಯಾಚರಣೆಯನ್ನು ವಾಣಿಜ್ಯ ರೂಪದಲ್ಲಿ ಕೈಗೊಳ್ಳಲು ಇಚ್ಛಿಸುವ ಯಾವನೇ ವ್ಯಕ್ತಿಯು, ಲೈಸೆನ್ಸಿನ ಮಂಜೂರಾತಿಗಾಗಿ ಲೈಸೆನ್ಸು ಕೊಡುವ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು:

ಪರಂತು, ಈ ಪ್ರಕರಣದ ಪ್ರಾರಂಭದ ನಿಕಟಪೂರ್ವದಲ್ಲಿ, ಯಾವುದೇ ಕೀಟನಾಶಕವನ್ನು ತಯಾರಿಸುವ ಅಥವಾ ಮಾರಾಟ ಮಾಡುವ, ದಾಸ್ತಾನು ಮಾಡುವ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸುವ ಅಥವಾ ವಿತರಣೆ ಮಾಡುವ ವ್ಯವಹಾರದಲ್ಲಿ ತೊಡಗಿರುವ ಯಾವನೇ ವ್ಯಕ್ತಿಯು, ಲೈಸೆನ್ಸಿನ ಮಂಜೂರಾತಿಗಾಗಿ, ಲೈಸೆನ್ಸು ಕೊಡುವ ಅಧಿಕಾರಿಗೆ ಅಂಥ ಪ್ರಾರಂಭದ ದಿನಾಂಕದಿಂದ ಹದಿನೆಂಟು ತಿಂಗಳುಗಳ ಅವಧಿಯೊಳಗೆ ಅರ್ಜಿ ಸಲ್ಲಿಸಬಹುದು :

ಮತ್ತೂ ಪರಂತು, 1977 ರ ಕೀಟನಾಶಕಗಳ (ತಿದ್ದುಪಡಿ) ಅಧಿನಿಯಮದ (1977 ರ 24) ಪ್ರಾರಂಭದ ನಿಕಟಪೂರ್ವದಲ್ಲಿ ವಿನಾಶಕಾರಿ ಕೀಟಗಳ ನಿಯಂತ್ರಣ ಕಾರ್ಯಾಚರಣೆಯಲ್ಲಿ ವಾಣಿಜ್ಯ ರೂಪದಲ್ಲಿ ತೊಡಗಿರುವ ಯಾವನೇ ವ್ಯಕ್ತಿಯು, ಲೈಸೆನ್ಸಿನ ಮಂಜೂರಾತಿಗಾಗಿ, ಲೈಸೆನ್ಸು ಕೊಡುವ ಅಧಿಕಾರಿಗೆ ಸದರಿ ಅಧಿನಿಯಮದ ಪ್ರಾರಂಭದಿಂದ ಆರು ತಿಂಗಳುಗಳ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸತಕ್ಕದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದು ಮತ್ತು ಅದು ಅಂಥ ವಿವರಗಳನ್ನು ಒಳಗೊಂಡಿರತಕ್ಕದು.

(3) ಲೈಸೆನ್ಸು ಮಂಜೂರಾತಿಗಾಗಿ ಯಾವುದೇ ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸು ಕೊಡುವ ಅಧಿಕಾರಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಷರತ್ತುಗಳ ಮೇಲೆ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ತರುವಾಯ ಲೈಸೆನ್ಸನ್ನು ಮಂಜೂರು ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಕೊಡಲಾದ ಲೈಸೆನ್ಸು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಸಿಂಧುವಾಗಿರತಕ್ಕದು ಮತ್ತು ನಿಯಮಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಕಾಲ ಕಾಲಕ್ಕೆ ಅದನ್ನು ನವೀಕರಿಸಬಹುದು:

ಪರಂತು, ಲೈಸೆನ್ಸನ್ನು, (1) ನೇ ಉಪ-ಪ್ರಕರಣದ (ಒಂದನೇ ಪರಂತುಕ ಅಥವಾ ಸಂದರ್ಭಾನುಸಾರ, ಎರಡನೇ ಪರಂತುಕ) ಮೇರೆಗೆ ಅರ್ಜಿಸಲ್ಲಿಸಿದ ಯಾವನೇ ವ್ಯಕ್ತಿಗೆ ಮಂಜೂರು ಮಾಡಿರುವಲ್ಲಿ ಈ ಅಧಿನಿಯಮದ ಮೇರೆಗೆ ಯಾವ ಕೀಟನಾಶಕದ ನೋಂದಣಿಗಾಗಿನ ಅರ್ಜಿಯನ್ನು ತಿರಸ್ಕರಿಸಲಾಗಿದೆಯೋ, ಅಥವಾ ನೋಂದಣಿಯನ್ನು ರದ್ದುಪಡಿಸಲಾಗಿದೆಯೋ, ಆ ಯಾವುದೇ ಕೀಟನಾಶಕಕ್ಕೆ ಸಂಬಂಧಪಟ್ಟ ಲೈಸೆನ್ಸು, ಸರ್ಕಾರಿ ರಾಜಪತ್ರದಲ್ಲಿ ಅಂಥ ತಿರಸ್ಕರಣೆ ಅಥವಾ ರದ್ದಿಯಾತಿಯು ಬಗ್ಗೆ ಅಧಿಸೂಚಿಸಿದ ದಿನಾಂಕದಿಂದ ಪರಿಣಾಮಕಾರಿ ಆಗುವಂತೆ ರದ್ದಾಗಿರುವುದಾಗಿ ಭಾವಿಸತಕ್ಕದು.

(5) ಈ ಪ್ರಕರಣದ ಮೇರೆಗೆ ಲೈಸೆನ್ಸು ಮಂಜೂರಾತಿಗಾಗಿ ಅಥವಾ ನವೀಕರಿಸುವುದಕ್ಕಾಗಿ ಫೀಜನ್ನು ನಿಯಮಿಸುವಲ್ಲಿ ಗೃಹೋಪಯೋಗದ ಉದ್ದೇಶಕ್ಕಾಗಿ ಮತ್ತು ಇತರ ಉದ್ದೇಶಗಳಿಗಾಗಿ ಕೀಟನಾಶಕಗಳ ಮಾರಾಟ ಅಥವಾ ವಿತರಣೆಗೆ ಬೇರೆ ಬೇರೆ ಫೀಜನ್ನು ನಿಯಮಿಸಬಹುದು.

**14. ಲೈಸೆನ್ಸುಗಳನ್ನು ರದ್ದುಪಡಿಸುವುದು, ಅಮಾನತುಗೊಳಿಸುವುದು ಮತ್ತು ತಿದ್ದುಪಡಿ ಮಾಡುವುದು:—**

(1) ಲೈಸೆನ್ಸನ್ನು ಕೊಡುವ ಅಧಿಕಾರಿಯು,—

(ಕ) 13 ನೇ ಪ್ರಕರಣದ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡಿರುವುದು, ಅತ್ಯವಶ್ಯಕ ಸಂಗತಿಯ ಬಗ್ಗೆ ತಪ್ಪು ನಿರೂಪಣೆಯಿಂದಾಗಿ ಮಂಜೂರು ಮಾಡಲಾಗಿದೆಯೆಂದು; ಅಥವಾ

(ಖ) ಲೈಸೆನ್ಸುಧಾರಕನು, ಯಾವ ಷರತ್ತುಗಳ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡಲಾಗಿತ್ತೋ, ಆ ಷರತ್ತುಗಳನ್ನು ಪಾಲಿಸಲು ತಪ್ಪಿದ್ದರೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸಿದ್ದಾನೆಂದು,

—ಈ ಬಗ್ಗೆ ಅವನಿಗೆ ಮಾಡಿದ ಉಲ್ಲೇಖದ ಮೇಲಾಗಲಿ ಅಥವಾ ಅನ್ಯಥಾ ಆಗಲಿ ಮನದಟ್ಟಾದರೆ, ಆಗ ಲೈಸೆನ್ಸುಧಾರಕನು ಈ ಅಧಿನಿಯಮದ ಮೇರೆಗೆ ಗುರಿಯಾಗಬಹುದಾದ ಯಾವುದೇ ಇತರ ದಂಡನೆಗೆ ಬಾಧಕವಾಗದಂತೆ, ಲೈಸೆನ್ಸು ಕೊಡುವ ಅಧಿಕಾರಿಯು, ಲೈಸೆನ್ಸುಧಾರಕನಿಗೆ ಕಾರಣ ತೋರಿಸಲು ಅವಕಾಶ ಕೊಟ್ಟ ತರುವಾಯ, ಲೈಸೆನ್ಸನ್ನು ರದ್ದುಪಡಿಸಬಹುದು ಅಥವಾ ಅಮಾನತುಗೊಳಿಸಬಹುದು.

(2) ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಲೈಸೆನ್ಸು ಕೊಡುವ ಅಧಿಕಾರಿಯು 13ನೇ ಪ್ರಕರಣದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸನ್ನು ವ್ಯತ್ಯಸ್ಥಗೊಳಿಸಬಹುದು ಅಥವಾ ತಿದ್ದುಪಡಿ ಸಹ ಮಾಡಬಹುದು.

**15. ಲೈಸೆನ್ಸು ಕೊಡುವ ಅಧಿಕಾರಿಯ ತೀರ್ಮಾನದ ವಿರುದ್ಧ ಅಪೀಲು:—**(1) 13 ನೇ ಪ್ರಕರಣದ ಮೇರೆಗೆ [ (4) ನೇ ಉಪಪ್ರಕರಣದ ಪರಂತುಕದ ಮೇರೆಗಿನದನ್ನು ಹೊರತುಪಡಿಸಿ] ಅಥವಾ 14 ನೇ ಪ್ರಕರಣದ ಮೇರೆಗೆ ಯಾವನೇ ಲೈಸೆನ್ಸು ಕೊಡುವ ಅಧಿಕಾರಿಯ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅವನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ, ಅಂಥ ರೀತಿಯಲ್ಲಿ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಅಪೀಲು ಮಾಡಿಕೊಳ್ಳಬಹುದು :

ಪರಂತು, ಅಪೀಲು ಪ್ರಾಧಿಕಾರವು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಅದಕ್ಕೆ ಮನದಟ್ಟಾದರೆ, ಸದರಿ ಅವಧಿಯ ಮುಕ್ತಾಯದ ನಂತರವೂ ಅಪೀಲನ್ನು ಪುರಸ್ಕರಿಸಬಹುದು.

(2) (1) ನೇ ಉಪ ಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಕಾರಣ ತೋರಿಸಲು ಅವಕಾಶ ಕೊಟ್ಟ ತರುವಾಯ, ಸಾಮಾನ್ಯವಾಗಿ ಅಪೀಲನ್ನು ಆರು ತಿಂಗಳುಗಳೊಳಗೆ ವಿಲೆ ಮಾಡತಕ್ಕದು ಮತ್ತು ಅಪೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದು.

**16. ಕೇಂದ್ರ ಕೀಟನಾಶಕಗಳ ಪ್ರಯೋಗಾಲಯ:**—ಕೇಂದ್ರ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಕೇಂದ್ರ ಸರ್ಕಾರವು ನೇಮಕಮಾಡುವ ನಿರ್ದೇಶಕನ ನಿಯಂತ್ರಣದಲ್ಲಿ ಕೇಂದ್ರ ಕೀಟ ನಾಶಕಗಳ ಪ್ರಯೋಗಾಲಯವನ್ನು, ಅದಕ್ಕೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ವಹಿಸಲಾದ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ಥಾಪಿಸಬಹುದು :

ಪರಂತು, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಹಾಗೆ ನಿರ್ದೇಶಿಸಿದರೆ, ಕೇಂದ್ರ ಕೀಟ ನಾಶಕಗಳ ಪ್ರಯೋಗಾಲಯದ ಪ್ರಕಾರ್ಯಗಳನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುದೇ ಅಂಥ ಸಂಸ್ಥೆಯು ಕಾರ್ಯಗತಗೊಳಿಸತಕ್ಕದ್ದು ಮತ್ತು ಆ ತರುವಾಯ ಕೇಂದ್ರ ಕೀಟನಾಶಕಗಳ ಪ್ರಯೋಗಾಲಯದ ನಿರ್ದೇಶಕನ ಪ್ರಕಾರ್ಯಗಳನ್ನು ಹಾಗೆ ನಿರ್ದಿಷ್ಟಪಡಿಸಲಾದಷ್ಟು ಮಟ್ಟಿಗೆ ಆ ಸಂಸ್ಥೆಯ ಮುಖ್ಯಸ್ಥನು ನಿರ್ವಹಿಸತಕ್ಕದ್ದು.

**17. ಕೆಲವು ಕೀಟನಾಶಕಗಳ ಆಮದಿಗೆ ಮತ್ತು ತಯಾರಿಕೆಗೆ ನಿಷೇಧ :**—ಯಾವನೇ ವ್ಯಕ್ತಿಯು, ತಾನೇ ಆಗಲೀ ಅಥವಾ ತನ್ನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕವಾಗಿಯಾಗಲೀ—

(ಕ) ಯಾವುದೇ ತಪ್ಪಾಗಿ ಗುರುತು ಹಾಕಿದ ಕೀಟ ನಾಶಕವನ್ನು ;

(ಖ) ಯಾವ ಕೀಟ ನಾಶಕದ ಮಾರಾಟ, ವಿತರಣೆ ಅಥವಾ ಉಪಯೋಗವನ್ನು 27ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ನಿಷೇಧಿಸಲಾಗಿದೆಯೋ ಆ ಯಾವುದೇ ಕೀಟ ನಾಶಕವನ್ನು ;

(ಗ) ಯಾವ ಷರತ್ತುಗಳ ಮೇಲೆ ಕೀಟನಾಶಕವು ನೋಂದಣಿಯಾಗಿತ್ತೋ ಆ ಷರತ್ತುಗಳಿಗನುಸಾರವಾಗಿಲ್ಲದೆ ಯಾವುದೇ ಕೀಟನಾಶಕವನ್ನು ;

(ಘ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮದ ಯಾವುದೇ ಇತರ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಕೀಟ ನಾಶಕವನ್ನು ,

—ಆಮದು ಮಾಡಿಕೊಳ್ಳತಕ್ಕದ್ದಲ್ಲ ಅಥವಾ ತಯಾರಿಸತಕ್ಕದ್ದಲ್ಲ :

ಪರಂತು, 9ನೇ ಪ್ರಕರಣದ (1)ನೇ ಉಪಪ್ರಕರಣದ ಯಾವುದೇ ಪರಂತುಕದ ಮೇರೆಗೆ ಕೀಟ ನಾಶಕದ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿರುವ ಯಾವನೇ ವ್ಯಕ್ತಿಯು ಯಾವುದೇ ಅಂಥ ಕೀಟನಾಶಕವನ್ನು ಆಮದು ಮಾಡಿಕೊಳ್ಳುವುದನ್ನು ಅಥವಾ ತಯಾರಿಸುವುದನ್ನು ಮುಂದುವರಿಸಬಹುದು ಮತ್ತು ಅಂಥ ಕೀಟ ನಾಶಕವನ್ನು 3ನೇ ಪ್ರಕರಣದ (ಟ) ಖಂಡದ (vi)ನೇ ಉಪಖಂಡ ಅಥವಾ (vii)ನೇ ಉಪಖಂಡ ಅಥವಾ (viii)ನೇ ಉಪಖಂಡದ ಅರ್ಥವ್ಯಾಪ್ತಿಯಲ್ಲಿ, ನೋಂದಣಿ ಸಮಿತಿಯು ಸದರಿ ಕೀಟ ನಾಶಕದ ನೋಂದಣಿಯನ್ನು ತಿರಸ್ಕರಿಸುವ ಅದರ ತೀರ್ಮಾನವನ್ನು ಅವನಿಗೆ ತಿಳಿಸುವವರೆಗೆ ಅದನ್ನು ತಪ್ಪಾಗಿ ಗುರುತು ಹಾಕಿದ ಕೀಟನಾಶಕವೆಂದು ಭಾವಿಸತಕ್ಕದ್ದಲ್ಲ .

(2) ಯಾವನೇ ವ್ಯಕ್ತಿಯು ತಾನೇ ಆಗಲಿ ಅಥವಾ ತನ್ನ ಪರವಾಗಿ ಯಾವನೇ ವ್ಯಕ್ತಿಯ ಮೂಲಕವಾಗಲಿ, ಯಾವುದೇ ಕೀಟನಾಶಕವನ್ನು, ಈ ಅಧಿನಿಯಮದ ಮೇರೆಗೆ ಅಂಥ ಉದ್ದೇಶಕ್ಕಾಗಿ ಕೊಟ್ಟ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗನುಸಾರವಾಗಿ ಅಲ್ಲದೆ ತಯಾರಿಸತಕ್ಕದ್ದಲ್ಲ.

**18. ಕೆಲವು ಕೀಟನಾಶಕಗಳ ಮಾರಾಟ, ಮುಂತಾದವುಗಳ ನಿಷೇಧ:**—(1) ಯಾವನೇ ವ್ಯಕ್ತಿಯು ತಾನೇ ಆಗಲೀ ಅಥವಾ ತನ್ನ ಪರವಾಗಿ ಯಾವನೇ ವ್ಯಕ್ತಿಯ ಮೂಲಕವಾಗಲಿ—

(ಕ) ಈ ಅಧಿನಿಯಮದ ಮೇರೆಗೆ ನೋಂದಣಿಯಾಗಿರದ ಯಾವುದೇ ಕೀಟನಾಶಕವನ್ನು ;

(ಖ) ಯಾವ ಕೀಟನಾಶಕದ ಮಾರಾಟ, ವಿತರಣೆ ಅಥವಾ ಉಪಯೋಗವನ್ನು 27ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ನಿಷೇಧಿಸಲಾಗಿದೆಯೋ ಆ ಯಾವುದೇ ಕೀಟನಾಶಕವನ್ನು ;

(ಗ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮದ ಯಾವುದೇ ಇತರ ಉಪಬಂಧವನ್ನು ಉಲ್ಲಂಘಿಸಿ, ಯಾವುದೇ ಕೀಟನಾಶಕವನ್ನು ,

—ಮಾರಾಟ ಮಾಡತಕ್ಕದ್ದಲ್ಲ, ದಾಸ್ತಾನು ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸತಕ್ಕದ್ದಲ್ಲ, ವಿತರಣೆ ಮಾಡತಕ್ಕದ್ದಲ್ಲ, ಸಾಗಣೆ ಮಾಡತಕ್ಕದ್ದಲ್ಲ, ಉಪಯೋಗಿಸತಕ್ಕದ್ದಲ್ಲ ಅಥವಾ ಯಾವನೇ ಕೆಲಸಗಾರನ ಮೂಲಕ ಉಪಯೋಗಿಸುವಂತೆ ಮಾಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು ತಾನೇ ಆಗಲೀ ಅಥವಾ ತನ್ನ ಪರವಾಗಿ ಯಾವನೇ ವ್ಯಕ್ತಿಯ ಮೂಲಕವಾಗಿ ಆಗಲಿ ಯಾವುದೇ ಕೀಟನಾಶಕವನ್ನು, ಈ ಪ್ರಕರಣದ ಮೇರೆಗೆ ಅಂಥ ಉದ್ದೇಶಗಳಿಗಾಗಿ ಕೊಡಲಾದ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗನುಸಾರವಾಗಿ ಅಲ್ಲದೆ, ಮಾರಾಟ ಮಾಡತಕ್ಕದ್ದಲ್ಲ, ದಾಸ್ತಾನು ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ, ಅಥವಾ ವಿನಾಶಕಾರಿ ಕೀಟಗಳ ನಿಯಂತ್ರಣ ಕಾರ್ಯಾಚರಣೆಗಳಿಗೆ ವಾಣಿಜ್ಯ ರೂಪದಲ್ಲಿ ಉಪಯೋಗಿಸತಕ್ಕದ್ದಲ್ಲ.

ವಿವರಣೆ :—ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವ ಕೀಟನಾಶಕಕ್ಕಾಗಿ ಯಾವನೇ ವ್ಯಕ್ತಿಯು 9ನೇ ಪ್ರಕರಣದ (1)ನೇ ಉಪಪ್ರಕರಣದ ಯಾವುವೇ ಪರಂತುಕಗಳ ಮೇರೆಗೆ ನೋಂದಣಿ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವನೋ ಆ ಕೀಟ ನಾಶಕಕ್ಕೆ ಸಂಬಂಧಿಸಿದಂತೆ, ಅಂಥ ಕೀಟನಾಶಕವನ್ನು ನೋಂದಾಯಿಸುವುದನ್ನು ತಿರಸ್ಕರಿಸಿರುವುದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ದಿನಾಂಕದವರೆಗೆ ನೋಂದಣಿಯಾಗಿರುವುದಾಗಿ ಭಾವಿಸತಕ್ಕದ್ದು.

**19.** **ಕೀಟನಾಶಕ ವಿಶ್ಲೇಷಕರು :—**ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ತಾನು ಸೂಕ್ತವೆಂದು ಭಾವಿಸುವಂಥ ಸಂಖ್ಯೆಯ ಮತ್ತು ನಿಯಮಿಸಬಹುದಾದಂಥ ತಾಂತ್ರಿಕ ಮತ್ತು ಇತರ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ಅಂಥ ಪ್ರದೇಶಗಳಿಗಾಗಿ ಮತ್ತು ಈ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕೀಟನಾಶಕಗಳ ಅಥವಾ ಕೀಟನಾಶಕಗಳ ವರ್ಗಕ್ಕೆ ಸಂಬಂಧಿಸಿದಂತೆ ಕೀಟನಾಶಕಗಳ ವಿಶ್ಲೇಷಕರನ್ನಾಗಿ ನೇಮಿಸಬಹುದು :

ಪರಂತು, ಯಾವುದೇ ಕೀಟನಾಶಕವನ್ನು ತಯಾರಿಸುವುದು, ಆಮದು ಮಾಡಿಕೊಳ್ಳುವುದು ಅಥವಾ ಮಾರಾಟ ಮಾಡುವುದರಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಹಾಗೆ ನೇಮಕ ಮಾಡತಕ್ಕದ್ದಲ್ಲ.

**20.** **ಕೀಟನಾಶಕ ಪರಿಶೀಲಕರು:**—(1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಸೂಕ್ತವೆಂದು ಭಾವಿಸುವಂಥ ಸಂಖ್ಯೆಯ ಮತ್ತು ನಿಯಮಿಸಬಹುದಾದಂಥ ತಾಂತ್ರಿಕ ಮತ್ತು ಇತರ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಿಗಾಗಿ ಕೀಟನಾಶಕಗಳ ಪರಿಶೀಲಕರನ್ನಾಗಿ ನೇಮಿಸಬಹುದು :

ಪರಂತು, ಅಗತ್ಯಪಡಿಸಿದ ಅರ್ಹತೆಗಳನ್ನು ಹೊಂದಿರದ ಯಾವನೇ ವ್ಯಕ್ತಿಯನ್ನು 21ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಮತ್ತು (ಘ) ಖಂಡದ ಉದ್ದೇಶಗಳಿಗಾಗಿ ಮಾತ್ರ ಹಾಗೆ ನೇಮಕ ಮಾಡಬಹುದು :

ಮತ್ತೂ ಪರಂತು, ಯಾವುದೇ ಕೀಟನಾಶಕದ ತಯಾರಿಕೆ, ಆಮದು ಮಾಡಿಕೊಳ್ಳುವುದು ಅಥವಾ ಮಾರಾಟ ಮಾಡುವುದರಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಹಾಗೆ ನೇಮಕ ಮಾಡತಕ್ಕದ್ದಲ್ಲ.

(2) ಪ್ರತಿಯೊಬ್ಬ ಕೀಟನಾಶಕದ ಪರಿಶೀಲಕನನ್ನು, ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು ಮತ್ತು ಅವನನ್ನು ನೇಮಕ ಮಾಡುವ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅಧಿಕೃತವಾಗಿ ಅಧೀನನಾಗಿರತಕ್ಕದ್ದು.

**21.** **ಕೀಟನಾಶಕ ಪರಿಶೀಲಕರ ಅಧಿಕಾರಗಳು :**—(1) ಕೀಟನಾಶಕ ಪರಿಶೀಲಕನು—

(ಕ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಅಪರಾಧವನ್ನು ಮಾಡಲಾಗುತ್ತಿದೆಯೆಂದು ಅಥವಾ ಅಪರಾಧವು ಇನ್ನೇನು ಮಾಡಲಾಗುವುದರಲ್ಲಿದೆಯೆಂದು ನಂಬಲು ಕಾರಣವಿರುವ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ನೋಂದಣಿಯ ಯಾವುದೇ ಪ್ರಮಾಣ ಪತ್ರದ ಅಥವಾ ಅದರ ಮೇರೆಗೆ ಕೊಡಲಾದ ಲೈಸೆನ್ಸಿನ ಷರತ್ತುಗಳನ್ನು ಪಾಲಿಸಲಾಗುತ್ತಿದೆಯೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಎಲ್ಲ ಯುಕ್ತ ಕಾಲಗಳಲ್ಲಿ ಮತ್ತು ಅವನು ಅವಶ್ಯವೆಂದು ಪರಿಗಣಿಸುವ ಯಾವುದೇ ಅಂಥ ಸಹಾಯವು ಯಾವುದಾದರೂ ಇದ್ದರೆ, ಅದರೊಂದಿಗೆ ಪ್ರವೇಶಿಸಲು ಮತ್ತು ಶೋಧಿಸಲು ;

(ಖ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅನುಸರಣೆಯಲ್ಲಿ ತಯಾರಕ, ವಿತರಕ, ವಾಹಕ, ವ್ಯಾಪಾರಿ ಅಥವಾ ಯಾವನೇ ಇತರ ವ್ಯಕ್ತಿಯು ಇಟ್ಟಿರುವ ರಿಜಿಸ್ಟರುಗಳು, ದಾಖಲೆಗಳು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಲು ಮತ್ತು ಅವುಗಳನ್ನು ಪರಿಶೀಲಿಸಲು, ಪರೀಕ್ಷಿಸಲು ಮತ್ತು ಅವುಗಳ ಪ್ರತಿಗಳನ್ನು ಮಾಡಿಕೊಳ್ಳಲು ಅಥವಾ ಅವುಗಳಿಂದ ಉದ್ಧೃತಿಗಳನ್ನು ತೆಗೆದುಕೊಳ್ಳಲು ಮತ್ತು ಅವೆಲ್ಲ ಅಥವಾ ಅವುಗಳಲ್ಲಿ ಯಾವುದಾದರೂ, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ದಂಡನೀಯ ಅಪರಾಧವನ್ನು ಮಾಡಿದ್ದಕ್ಕಾಗಿ ಸಾಕ್ಷ್ಯವನ್ನು ಒದಗಿಸಬಹುದೆಂದು ನಂಬಲು ಅವನಿಗೆ ಕಾರಣವಿದ್ದರೆ ಅವುಗಳನ್ನು ಅಭಿಗ್ರಹಣ ಮಾಡಿಕೊಳ್ಳಲು ;

(ಗ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ತಾನು ಸೂಕ್ತವೆಂದು ಭಾವಿಸುವಂಥ ಪರೀಕ್ಷೆ ಮತ್ತು ವಿಚಾರಣೆಯನ್ನು ಮಾಡುವುದಕ್ಕೆ ಮತ್ತು ಆ ಉದ್ದೇಶಕ್ಕಾಗಿ ಯಾವುದೇ ವಾಹನವನ್ನು ನಿಲ್ಲಿಸಲು ;

(ಘ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾವ ಕೀಟನಾಶಕವನ್ನು ವಿತರಣೆ, ಮಾರಾಟ ಅಥವಾ ಉಪಯೋಗ ಮಾಡಲಾಗುತ್ತಿದೆ ಎಂದು ನಂಬಲು ಅವನಿಗೆ ಕಾರಣವಿರುವಾಗ ಆ ಯಾವುದೇ ಕೀಟನಾಶಕದ ವಿತರಣೆ, ಮಾರಾಟ ಅಥವಾ ಉಪಯೋಗವನ್ನು ಇಪ್ಪತ್ತು ದಿನಗಳಿಗೆ ಮೀರದ ನಿರ್ದಿಷ್ಟ ಅವಧಿಯವರೆಗೆ ನಿಲ್ಲಿಸಲು ಅಥವಾ ಆರೋಪಿತ ಉಲ್ಲಂಘನೆಯು, ಕೀಟನಾಶಕವನ್ನು ಹೊಂದಿರುವವನು, ಆ ನ್ಯೂನತೆಯನ್ನು ನಿವಾರಿಸಬಹುದಾದಂಥದು ಆಗಿದ್ದ ಹೊರತು, ಅಂಥ ಕೀಟನಾಶಕದ ದಾಸ್ತಾನನ್ನು ಅಭಿಗ್ರಹಣ ಮಾಡಿಕೊಳ್ಳಲು ;

(ಙ) ಯಾವುದೇ ಕೀಟನಾಶಕದ ಮಾದರಿಯನ್ನು ತೆಗೆದುಕೊಳ್ಳಲು ಮತ್ತು ಅಂಥ ಮಾದರಿಗಳನ್ನು ನಿಯಮಿಸಿದ ರೀತಿಯಲ್ಲಿ ಪರೀಕ್ಷೆಗಾಗಿ ಕೀಟನಾಶಕಗಳ ವಿಶ್ಲೇಷಕನಿಗೆ ವಿಶ್ಲೇಷಣೆಗಾಗಿ ಕಳುಹಿಸಿಕೊಡಲು ; ಮತ್ತು

(ಚ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಲು

— ಅಧಿಕಾರವನ್ನು ಹೊಂದಿರತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಈ ಅಧಿನಿಯಮದ ಮೇರೆಗೆ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಲಾದ ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸುವಂತೆ ಅನ್ವಯವಾಗತಕ್ಕದ್ದು.

(3) ಕೀಟನಾಶಕ ಪರಿಶೀಲಕನು, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 42ನೇ ಪ್ರಕರಣದ ಮೇರೆಗೆ ಪೊಲೀಸ್ ಅಧಿಕಾರಿಯು ಅಧಿಕಾರಗಳನ್ನು, ಆಪಾದರಿಯನ್ನು ಯಾವ ವ್ಯಕ್ತಿಯಿಂದ ತೆಗೆದುಕೊಳ್ಳಲಾಗಿದೆಯೋ ಅಥವಾ ಕೀಟನಾಶಕವನ್ನು ಅಭಿಗ್ರಹಣ ಮಾಡಿಕೊಳ್ಳಲಾಗಿದೆಯೋ ಆ ವ್ಯಕ್ತಿಯು ನಿಜವಾದ ಹೆಸರು ಮತ್ತು ವಾಸಸ್ಥಳವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ, ಚಲಾಯಿಸಬಹುದು.

**22. ಕೀಟನಾಶಕ ಪರಿಶೀಲಕರು ಅನುಸರಿಸಬೇಕಾದ ಪ್ರಕ್ರಿಯೆ :**— (1) ಕೀಟನಾಶಕ ಪರಿಶೀಲಕನು, 21ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡದ ಮೇರೆಗೆ ಯಾವುದೇ ದಾಖಲೆ, ರಿಜಿಸ್ಟರು ಅಥವಾ ದಸ್ತಾವೇಜನ್ನು ಅಭಿಗ್ರಹಣ ಮಾಡಿಕೊಂಡಲ್ಲಿ, ಸಾಧ್ಯವಾಗಬಹುದಾದಷ್ಟು ಬೇಗನೆ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು ಮತ್ತು ಅವುಗಳ ಅಭಿರಕ್ಷೆಗಾಗಿ ಅವನ ಆದೇಶ ಪಡೆಯತಕ್ಕದ್ದು.

(2) ಕೀಟನಾಶಕ ಪರಿಶೀಲಕನು, 21ನೇ ಪ್ರಕರಣದ (1)ನೇ ಉಪಪ್ರಕರಣದ (ಘ) ಖಂಡದ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಲ್ಲಿ, —

(ಕ) ಕೀಟನಾಶಕ ಅಥವಾ ಅದರ ಮಾರಾಟ, ವಿತರಣೆ ಅಥವಾ ಉಪಯೋಗವು 18ನೇ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವುದೇ ಅಥವಾ ಇಲ್ಲವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವನು ಶೀಘ್ರ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಕೀಟನಾಶಕ ಅಥವಾ ಅದರ ಮಾರಾಟ, ವಿತರಣೆ ಅಥವಾ ಉಪಯೋಗವು ಹಾಗೆ ಉಲ್ಲಂಘನೆ ಮಾಡುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡರೆ, ಕೂಡಲೆ ಸದರಿ ಖಂಡದ ಮೇರೆಗೆ ಮಾಡಿದ ಆದೇಶವನ್ನು ಅವನು ತತ್‌ಕ್ಷಣವೇ ರದ್ದುಪಡಿಸತಕ್ಕದ್ದು ಅಥವಾ ಸಂದರ್ಭಾನುಸಾರ, ಅಭಿಗ್ರಹಣ ಮಾಡಿಕೊಂಡ ದಾಸ್ತಾನಿನ ವಾಪಸಾತಿಗಾಗಿ ಅವಶ್ಯವಾಗಬಹುದಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ;

(ಖ) ಕೀಟನಾಶಕದ ದಾಸ್ತಾನನ್ನು ಅವನು ಅಭಿಗ್ರಹಣ ಮಾಡಿಕೊಂಡರೆ, ಸಾಧ್ಯವಾಗಬಹುದಾದಷ್ಟು ಬೇಗನೆ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು ಮತ್ತು ಅವುಗಳ ಅಭಿರಕ್ಷೆಗಾಗಿ ಅವನ ಆದೇಶ ಪಡೆಯತಕ್ಕದ್ದು;

(ಗ) ಯಾವುದೇ ಪ್ರಾಸಿಕ್ಯೂಷನನ್ನು ಹೂಡುವುದಕ್ಕೆ ಬಾಧಕವಾಗದಂತೆ, ಆಪಾದಿಸಲಾದ ಉಲ್ಲಂಘನೆಯು, ಕೀಟನಾಶಕದ ಸ್ವಾಧೀನದಾರನು ಆ ನ್ಯೂನತೆಯನ್ನು ಪರಿಹರಿಸಬಹುದಾದಂಥದು ಆಗಿದ್ದರೆ, ನ್ಯೂನತೆಯನ್ನು ಹಾಗೆ ಪರಿಹರಿಸಲಾಗಿದೆ ಎಂದು ಅವನಿಗೆ ಮನದಟ್ಟಾದರೆ ಅವನು ತತ್‌ಕ್ಷಣವೇ ತನ್ನ ಆದೇಶವನ್ನು ರದ್ದುಪಡಿಸತಕ್ಕದ್ದು ಮತ್ತು ಕೀಟನಾಶಕ ಪರಿಶೀಲಕನು ಕೀಟನಾಶಕದ ದಾಸ್ತಾನನ್ನು ಅಭಿಗ್ರಹಣ ಮಾಡಿಕೊಂಡಿರುವ ಸಂದರ್ಭದಲ್ಲಿ, ಅವನು ಸಾಧ್ಯವಾಗಬಹುದಾದಷ್ಟು ಬೇಗನೆ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು ಮತ್ತು ಅದರ ಬಿಡುಗಡೆಯ ಬಗ್ಗೆ ಅವನ ಆದೇಶಗಳನ್ನು ಪಡೆಯತಕ್ಕದ್ದು.

(3) ಕೀಟನಾಶಕ ಪರಿಶೀಲಕನು, ಕೀಟನಾಶಕದ ಯಾವುದೇ ಮಾದರಿಯನ್ನು ತೆಗೆದುಕೊಂಡಿರುವಲ್ಲಿ, ಅವನು ಅದಕ್ಕೆ ನ್ಯಾಯ ಬೆಲೆಯನ್ನು ಕೊಡತಕ್ಕದ್ದು ಮತ್ತು ಅದಕ್ಕಾಗಿ ಬರಹದಲ್ಲಿನ ಸ್ವೀಕೃತಿಯನ್ನು ಅಗತ್ಯಪಡಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಬೆಲೆಯನ್ನು ತಿರಸ್ಕರಿಸಿದಲ್ಲಿ ಅಥವಾ ಕೀಟನಾಶಕ ಪರಿಶೀಲಕನು 21ನೇ ಪ್ರಕರಣದ (1)ನೇ ಉಪಪ್ರಕರಣದ (ಘ) ಖಂಡದ ಮೇರೆಗೆ ಯಾವುದೇ ಕೀಟನಾಶಕದ ದಾಸ್ತಾನನ್ನು ಅಭಿಗ್ರಹಣ ಮಾಡಿಕೊಂಡಿರುವಲ್ಲಿ, ಅವನು ಅದಕ್ಕಾಗಿ ನಿಯಮಿಸಿದ ನಮೂನೆಯಲ್ಲಿ ರಶೀದಿಯನ್ನು ಕೊಡಮಾಡತಕ್ಕದ್ದು.

(5) ಕೀಟನಾಶಕ ಪರಿಶೀಲಕನು, ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಕೀಟನಾಶಕದ ಮಾದರಿಯನ್ನು ತೆಗೆದುಕೊಂಡಿರುವಲ್ಲಿ, ಅವನು ಯಾವ ವ್ಯಕ್ತಿಯಿಂದ ಅದನ್ನು ತೆಗೆದುಕೊಳ್ಳುವನೋ ಆ ವ್ಯಕ್ತಿಗೆ ನಿಯಮಿಸಿದ ನಮೂನೆಯಲ್ಲಿ ಬರಹದಲ್ಲಿ ಅಂಥ ಉದ್ದೇಶವನ್ನು ತಿಳಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಗೈರುಹಾಜರಾದ ಹೊರತು ಅವನ ಸಮ್ಮುಖದಲ್ಲಿ ಮಾದರಿಯನ್ನು ಮೂರು ಭಾಗಗಳಾಗಿ ವಿಭಾಗಿಸತಕ್ಕದ್ದು ಮತ್ತು ಅವುಗಳಿಗೆ ಭದ್ರವಾಗಿ ಮೊಹರು ಹಾಕತಕ್ಕದ್ದು ಮತ್ತು ಸೂಕ್ತವಾಗಿ ಗುರುತು ಮಾಡತಕ್ಕದ್ದು ಮತ್ತು ಹಾಗೆ ಮೊಹರು ಮಾಡಿದ ಮತ್ತು ಗುರುತು ಮಾಡಿದ ಎಲ್ಲ ಅಥವಾ ಯಾವುದೇ ಭಾಗಗಳಿಗೆ ತನ್ನದೇ ಆದ ಮೊಹರು ಹಾಕಲು ಮತ್ತು ಗುರುತು ಮಾಡಲು ಅಂಥ ವ್ಯಕ್ತಿಗೆ ಅವಕಾಶ ಕೊಡತಕ್ಕದ್ದು :

ಪರಂತು, ಕೀಟನಾಶಕಗಳನ್ನು ಸಣ್ಣ ಪ್ರಮಾಣದ ಪೆಟ್ಟಿಗೆಗಳಲ್ಲಿ ಮಾಡಿಟ್ಟಿರುವಲ್ಲಿ ಕೀಟನಾಶಕ ಪರಿಶೀಲಕನು, ಮಾದರಿಗಳನ್ನು ಹಿಂದೆ ಹೇಳಿದಂತೆ ವಿಭಾಗಿಸುವ ಬದಲು, ಅವುಗಳನ್ನು ಸೂಕ್ತವಾಗಿ ಗುರುತು ಮಾಡಿದ ಮತ್ತು ಅವಶ್ಯವಾದಲ್ಲಿ ಮೊಹರು ಹಾಕಿದ ತರುವಾಯ ಸದರಿ ಪೆಟ್ಟಿಗೆಗಳಲ್ಲಿ ಮೂರನ್ನು ತೆಗೆದುಕೊಳ್ಳಬಹುದು ಮತ್ತು ಕೀಟನಾಶಕವನ್ನು ತೆರೆದಿಡುವುದರಿಂದ ಅದು ಅವನತಿ ಹೊಂದುವ ಅಥವಾ ಅನ್ಯಥಾ ಹಾನಿಗೊಳಗಾಗುವ ಸಂಭವವಿರುವಂಥದ್ದಾಗಿದ್ದರೆ ಅವುಗಳನ್ನು ಸೂಕ್ತವಾಗಿ ಗುರುತು ಮಾಡಿದ ಮತ್ತು ಅವಶ್ಯವಾದಲ್ಲಿ ಮೊಹರು ಹಾಕಿದ ತರುವಾಯ ಸದರಿ ಪೆಟ್ಟಿಗೆಗಳಲ್ಲಿ ಮೂರನ್ನು ತೆಗೆದುಕೊಳ್ಳತಕ್ಕದ್ದು.

(6) ಕೀಟನಾಶಕಗಳ ಪರಿಶೀಲಕನು, ಸಂದರ್ಭಾನುಸಾರ, ಹಾಗೆ ವಿಭಜಿಸಿದ ಮಾದರಿಯ ಒಂದು ಭಾಗವನ್ನು ಅಥವಾ ಒಂದು ಪೆಟ್ಟಿಗೆಯನ್ನು, ಅದನ್ನು ತಾನು ಯಾರಿಂದ ಪಡೆಯುವನೋ ಆ ವ್ಯಕ್ತಿಗೆ ಹಿಂತಿರುಗಿಸತಕ್ಕದ್ದು ಮತ್ತು ಉಳಿದುದನ್ನು ತನ್ನ ಹತ್ತಿರ ಉಳಿಸಿಕೊಳ್ಳತಕ್ಕದ್ದು ಮತ್ತು ಸದರಿಯವುಗಳನ್ನು ಕೆಳಕಂಡ ರೀತಿಯಲ್ಲಿ ವಿಲೆ ಮಾಡತಕ್ಕದ್ದು:—

(i) ಒಂದು ಭಾಗ ಅಥವಾ ಪೆಟ್ಟಿಗೆಯನ್ನು ಅವನು ತಕ್ಷಣವೇ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಕೀಟನಾಶಕ ವಿಶ್ಲೇಷಕನಿಗೆ ಕಳುಹಿಸತಕ್ಕದ್ದು; ಮತ್ತು

(ii) ಎರಡನೆಯದನ್ನು, ಕೀಟನಾಶಕಕ್ಕೆ ಸಂಬಂಧಿಸಿದಂತೆ ಯಾವುವೇ ವ್ಯವಹರಣೆಗಳನ್ನು ಹೂಡಿದ್ದರೆ, ಆ ವ್ಯವಹರಣೆಗಳನ್ನು ಯಾವ ನ್ಯಾಯಾಲಯದಲ್ಲಿ ಹೂಡಲಾಗಿದೆಯೋ ಆ ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕದ್ದು.

**23. ಕೀಟನಾಶಕಗಳನ್ನು ತಯಾರಿಸುವ ಅಥವಾ ಇಟ್ಟಿರುವ ಸ್ಥಳವನ್ನು ಬಹಿರಂಗಪಡಿಸಲು ವ್ಯಕ್ತಿಗಳು ಬದ್ಧರಾಗಿರತಕ್ಕದು:**—ಯಾವುದೇ ಕೀಟನಾಶಕವನ್ನು ತಯಾರಿಸುತ್ತಿರುವ ಅಥವಾ ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ಅದನ್ನು ಇಟ್ಟಿರುವ, ತತ್ಕಾಲದಲ್ಲಿ ಯಾವುದೇ ಆವರಣದ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಕೀಟನಾಶಕ ಪರಿಶೀಲಕನು ಹಾಗೆ ಮಾಡಲು ಅಗತ್ಯಪಡಿಸಿದ ಮೇಲೆ, ಸಂದರ್ಭಾನುಸಾರ, ಕೀಟನಾಶಕವನ್ನು ತಯಾರಿಸುತ್ತಿರುವ ಅಥವಾ ಇಟ್ಟಿರುವ ಸ್ಥಳವನ್ನು ಕೀಟನಾಶಕ ಪರಿಶೀಲಕನಿಗೆ ಬಹಿರಂಗಪಡಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರತಕ್ಕದು.

**24. ಕೀಟನಾಶಕ ವಿಶ್ಲೇಷಕನ ವರದಿ:**—(1) 22ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಪರೀಕ್ಷೆಗೆ ಅಥವಾ ವಿಶ್ಲೇಷಣೆಗೆ ಯಾವುದೇ ಕೀಟನಾಶಕದ ಮಾದರಿಯನ್ನು ಯಾವ ಕೀಟನಾಶಕ ವಿಶ್ಲೇಷಕನಿಗೆ ಒಪ್ಪಿಸಲಾಗಿದೆಯೋ ಆ ಕೀಟನಾಶಕ ವಿಶ್ಲೇಷಕನು, ಅರವತ್ತು ದಿನಗಳ ಅವಧಿಯೊಳಗೆ ಅದನ್ನು ಒಪ್ಪಿಸಿದ ಕೀಟನಾಶಕ ಪರಿಶೀಲಕನಿಗೆ ನಿಯಮಿಸಿದ ನಮೂನೆಯಲ್ಲಿ, ದ್ವಿಪ್ರತಿಯಲ್ಲಿ ಸಹಿ ಹಾಕಿದ ವರದಿಯನ್ನು ವಶಾವಣೆ ಮಾಡತಕ್ಕದು.

(2) ಕೀಟನಾಶಕ ಪರಿಶೀಲಕನು ಅದನ್ನು ಸ್ವೀಕರಿಸಿದ ಮೇಲೆ, ವರದಿಯನ್ನು ಯಾರಿಂದ ತೆಗೆದುಕೊಳ್ಳಲಾಗಿತ್ತೋ ಅವನಿಗೆ ವರದಿಯ ಒಂದು ಪ್ರತಿಯನ್ನು ವಶಾವಣೆ ಮಾಡತಕ್ಕದು ಮತ್ತು ಇನ್ನೊಂದು ಪ್ರತಿಯನ್ನು ಮಾದರಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಉಪಯೋಗಿಸುವುದಕ್ಕಾಗಿ ಉಳಿಸಿಕೊಳ್ಳತಕ್ಕದು.

(3) ಕೀಟನಾಶಕ ವಿಶ್ಲೇಷಕನು ಸಹಿ ಮಾಡಿದ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜು, ಅದರಲ್ಲಿ ನಿರೂಪಿಸಿರುವ ಸಂಗತಿಗಳ ಸಾಕ್ಷ್ಯವಾಗಿರತಕ್ಕದು ಮತ್ತು ಯಾವ ವ್ಯಕ್ತಿಯಿಂದ ಮಾದರಿಯನ್ನು ತೆಗೆದುಕೊಳ್ಳಲಾಗಿತ್ತೋ ಆ ಯಾವನೇ ವ್ಯಕ್ತಿಯು ವರದಿಯ ಪ್ರತಿಯನ್ನು ಸ್ವೀಕರಿಸಿದ ಇಪ್ಪತ್ತೆಂಟು ದಿವಸಗಳೊಳಗೆ, ಕೀಟನಾಶಕ ಪರಿಶೀಲಕನಿಗೆ ಅಥವಾ ಮಾದರಿಗೆ ಸಂಬಂಧಿಸಿದಂತೆ ಯಾವುವೇ ವ್ಯವಹರಣೆಗಳು ಇತ್ಯರ್ಥದಲ್ಲಿರುವ ನ್ಯಾಯಾಲಯಕ್ಕೆ ವರದಿಗೆ ವಿರುದ್ಧವಾಗಿ ಸಾಕ್ಷ್ಯವನ್ನು ಮುಂದಿಡಲು ಅವನು ಉದ್ದೇಶಿಸಿರುವುದಾಗಿ ಬರಹದಲ್ಲಿ ತಿಳಿಸಿದ್ದ ಹೊರತು, ಅಂಥ ಸಾಕ್ಷ್ಯವು ನಿರ್ಣಾಯಕವಾಗಿರತಕ್ಕದು.

(4) ಮಾದರಿಯನ್ನು ಈಗಾಗಲೇ ಕೇಂದ್ರ ಕೀಟನಾಶಕ ಪ್ರಯೋಗಾಲಯದಲ್ಲಿ ಪರೀಕ್ಷಿಸಿದ್ದ ಅಥವಾ ವಿಶ್ಲೇಷಿಸಿದ್ದ ಹೊರತು, ಯಾವನೇ ವ್ಯಕ್ತಿಯು (3)ನೇ ಉಪಪ್ರಕರಣದ ಮೇರೆಗೆ ಕೀಟನಾಶಕ ವಿಶ್ಲೇಷಕನ ವರದಿಗೆ ವಿರುದ್ಧವಾಗಿ ಸಾಕ್ಷ್ಯವನ್ನು ಮುಂದಿಡಲು ತನ್ನ ಉದ್ದೇಶವನ್ನು ತಿಳಿಸಿರುವಲ್ಲಿ, ನ್ಯಾಯಾಲಯವು, ತಾನಾಗಿಯೇ ಅಥವಾ ಫಿರ್ಯಾದುದಾರ ಅಥವಾ ಆಪಾದಿತನ ಕೋರಿಕೆಯ ಮೇಲೆ ಅದರ ವಿವೇಚನಾನುಸಾರ, ಸದರಿ ಪ್ರಯೋಗಾಲಯಕ್ಕೆ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ, 22ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದ ಕೀಟನಾಶಕದ ಮಾದರಿಯನ್ನು ಕಳುಹಿಸುವಂತೆ ಮಾಡಬಹುದು ಮತ್ತು ಆ ಪ್ರಯೋಗಾಲಯವು ಅದನ್ನು ಪರೀಕ್ಷಿಸತಕ್ಕದು ಅಥವಾ ವಿಶ್ಲೇಷಿಸತಕ್ಕದು ಮತ್ತು ಅದರ ಫಲಿತಾಂಶವನ್ನು ಕೇಂದ್ರ ಕೀಟನಾಶಕ ಪ್ರಯೋಗಾಲಯದ ನಿರ್ದೇಶಕನು ಅಥವಾ ಅವನ ಅಧಿಕಾರದ ಮೇರೆಗೆ ಸಹಿ ಹಾಕಿ ಬರಹದಲ್ಲಿ ಅದು ವರದಿ ಮಾಡತಕ್ಕದು ಮತ್ತು ಅದರಲ್ಲಿ ನಿರೂಪಿಸಿರುವ ಸಂಗತಿಗಳ ಬಗ್ಗೆ ಅಂಥ ವರದಿಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದು.

(5) (4)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಕೀಟನಾಶಕ ಪ್ರಯೋಗಾಲಯವು ಮಾಡಿದ ಪರೀಕ್ಷೆ ಅಥವಾ ವಿಶ್ಲೇಷಣೆಯ ಖರ್ಚನ್ನು ನ್ಯಾಯಾಲಯವು ನಿರ್ದೇಶಿಸತಕ್ಕಂತೆ ಫಿರ್ಯಾದುದಾರ ಅಥವಾ ಆಪಾದಿತನು ಸಂದಾಯ ಮಾಡತಕ್ಕದು.

**25. ಅಧಿಹರಣ:**—(1) ಯಾವನೇ ವ್ಯಕ್ತಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸಿರುವುದಕ್ಕಾಗಿ ಈ ಅಧಿನಿಯಮದ ಮೇರೆಗೆ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ, ಯಾವ ಕೀಟನಾಶಕಕ್ಕೆ ಸಂಬಂಧಿಸಿದಂತೆ ಉಲ್ಲಂಘನೆಯನ್ನು ಮಾಡಲಾಗಿದೆಯೋ ಆ ಯಾವುದೇ ಕೀಟನಾಶಕದ ದಾಸ್ತಾನು ಅಧಿಹರಣಕ್ಕೆ ಗುರಿಯಾಗತಕ್ಕದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ ನ್ಯಾಯಾಲಯಕ್ಕೆ, ಕೀಟನಾಶಕ ಪರಿಶೀಲಕನ ಅರ್ಜಿಯ ಮೇಲೆ ಅಥವಾ ಅನ್ಯಥಾ ಮತ್ತು ಅವಶ್ಯವಾಗಬಹುದಾದಂಥ ವಿಚಾರಣೆಯ ತರುವಾಯ ಆ ಕೀಟನಾಶಕವು ತಪ್ಪಾಗಿ ಗುರುತು ಹಾಕಿದ ಕೀಟನಾಶಕವೆಂದು ಮನದಟ್ಟಾದರೆ, ಅಂಥ ಕೀಟನಾಶಕವು ಅಧಿಹರಣಕ್ಕೆ ಗುರಿಯಾಗತಕ್ಕದು.

**26. ವಿಷ ಪ್ರಯೋಗದ ಬಗ್ಗೆ ಅಧಿಸೂಚನೆ:**—ರಾಜ್ಯ ಸರ್ಕಾರವು, ಸರ್ಕಾರಿ ರಾಜ ಪತ್ರದಲ್ಲಿ ಅಧಿಸೂಚನೆ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಿದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು, (ಯಾವುದೇ ಕೀಟನಾಶಕದ ಉಪಯೋಗ ಅಥವಾ ಅದನ್ನು ನಿರ್ವಹಿಸುವುದರ ಮೂಲಕ) ಅವನ ಅಥವಾ ಅವರ ಗಮನಕ್ಕೆ ಬರುವ ವಿಷ ಪ್ರಯೋಗದ ಬಗೆಗಿನ ಎಲ್ಲ ಘಟನೆಗಳನ್ನು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗೆ ವರದಿ ಮಾಡುವಂತೆ ಅಗತ್ಯಪಡಿಸಬಹುದು.

**27. ಸಾರ್ವಜನಿಕ ಸುರಕ್ಷತೆಯ ಕಾರಣಗಳಿಗಾಗಿ ಕೀಟನಾಶಕದ ಮಾರಾಟ, ಇತ್ಯಾದಿಗಳ ನಿಷೇಧ:**—(1) 26ನೇ ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ 3ನೇ ಪ್ರಕರಣದ (ಇ) ಖಂಡದ (iii)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೀಟನಾಶಕ ಅಥವಾ ಅದರ ಯಾವುದೇ ನಿರ್ದಿಷ್ಟ ತಂಡದ ಉಪಯೋಗವು, ಮನುಷ್ಯರು ಅಥವಾ ಪ್ರಾಣಿಗಳಿಗೆ, ಕೂಡಲೇ ಕ್ರಮ ಕೈಕೊಳ್ಳುವುದು ವಿಹಿತವಾದುದು ಅಥವಾ ಅವಶ್ಯವಾದುದು ಎಂಬಂಥ ಅಪಾಯವನ್ನು ಉಂಟು ಮಾಡುವ ಸಂಭವವಿದ್ದರೆ, ಆಗ ಆ ಸರ್ಕಾರವು ಆ ವಿಷಯದ ಬಗ್ಗೆ ತನಿಖೆಯನ್ನು ಮಾಡುವವರೆಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ, ಅಷ್ಟರಮಟ್ಟಿಗೆ ಮತ್ತು (ಅರವತ್ತು ದಿನಗಳಿಗೆ ಮೀರದಂಥ) ಅವಧಿಯವರೆಗೆ, ಆ ಕೀಟನಾಶಕದ ಅಥವಾ ಅದರ ತಂಡದ ಮಾರಾಟ, ವಿತರಣೆ ಅಥವಾ ಉಪಯೋಗವನ್ನು ನಿಷೇಧಿಸಬಹುದು:

ಪರಂತು, ಸದರಿ ಅವಧಿಯೊಳಗೆ ತನಿಖೆಯನ್ನು ಮುಗಿಸಲಾಗದಿದ್ದಲ್ಲಿ, ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಅದೇ ರೀತಿಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಒಟ್ಟಿನಲ್ಲಿ ಮೂವತ್ತು ದಿನಗಳಿಗೆ ಮೀರದಂಥ ಹೆಚ್ಚಿನ ಅವಧಿ ಅಥವಾ ಅವಧಿಗಳವರೆಗೆ ವಿಸ್ತರಿಸಬಹುದು.

(2) ಕೇಂದ್ರ ಸರ್ಕಾರವು, ತನ್ನದೇ ಆದ ತನಿಖೆಯ ಪರಿಣಾಮದಿಂದಾಗಿ ಅಥವಾ ರಾಜ್ಯ ಸರ್ಕಾರದಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಮತ್ತು ನೋಂದಣಿ ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ, ಸದರಿ ಕೀಟನಾಶಕ ಅಥವಾ ಅದರ ತಂಡದ ಉಪಯೋಗವು ಯಾವುದೇ ಅಂಥ ಅಪಾಯವನ್ನುಂಟು ಮಾಡುವ ಸಂಭವವಿದೆ ಅಥವಾ ಉಂಟು ಮಾಡುವ ಸಂಭವವಿಲ್ಲವೆಂದು ಮನದಟ್ಟು ಮಾಡಿಕೊಂಡರೆ, ಪ್ರಕರಣದ ಸನ್ನಿವೇಶಗಳನ್ನು ಅವಲಂಬಿಸಿ ತಾನು ಸೂಕ್ತವೆಂದು ಭಾವಿಸುವ (ಕೀಟನಾಶಕ ನೋಂದಣಿಯನ್ನು ತಿರಸ್ಕರಿಸುವ ಅಥವಾ ಅದಕ್ಕೆ ಸಂಬಂಧಿಸಿದಂತೆ ಕೊಟ್ಟ ನೋಂದಣಿ ಪ್ರಮಾಣಪತ್ರ, ಯಾವುದಾದರೂ ಇದ್ದರೆ, ಅದನ್ನು ರದ್ದುಪಡಿಸುವ ಆದೇಶವನ್ನೂ ಒಳಗೊಂಡಂಥ) ಆದೇಶವನ್ನು ಅದು ಮಾಡಬಹುದು.

**28. ನೋಂದಣಿ, ಇತ್ಯಾದಿಗಳನ್ನು ರದ್ದುಪಡಿಸುವ ಬಗ್ಗೆ ಅಧಿಸೂಚನೆ:**—ಯಾವುದೇ ಕೀಟನಾಶಕವನ್ನು ನೋಂದಾಯಿಸಲು ನಿರಾಕರಿಸುವುದನ್ನು ಅಥವಾ ಯಾವುದೇ ಕೀಟನಾಶಕದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವುದನ್ನು ಸರ್ಕಾರಿ ರಾಜಪತ್ರದಲ್ಲಿ ಹಾಗೂ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಅಧಿಸೂಚಿಸತಕ್ಕದು.

**29. ಅಪರಾಧಗಳು ಮತ್ತು ದಂಡನೆ:**—(1) (ಕ) 3ನೇ ಪ್ರಕರಣದ (ಡ) ಖಂಡದ (i)ನೇ ಉಪಖಂಡ, (iii) ನೇ ಉಪಖಂಡ ಅಥವಾ (viii) ನೇ ಉಪಖಂಡದ ಮೇರೆಗೆ ತಪ್ಪಾಗಿ ಗುರುತು ಹಾಕಲಾದುದು ಎಂದು ಭಾವಿಸಲಾಗುವ ಯಾವುದೇ ಕೀಟನಾಶಕವನ್ನು ಆಮದು ಮಾಡಿಕೊಳ್ಳುವ, ತಯಾರಿಸುವ, ಮಾರಾಟ ಮಾಡುವ, ದಾಸ್ತಾನು ಮಾಡುವ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸುವ ಅಥವಾ ವಿತರಣೆ ಮಾಡುವ; ಅಥವಾ

(ಖ) ನೋಂದಣಿಯ ಪ್ರಮಾಣಪತ್ರವಿಲ್ಲದೆ ಯಾವುದೇ ಕೀಟನಾಶಕವನ್ನು ಆಮದು ಮಾಡಿಕೊಳ್ಳುವ ಅಥವಾ ತಯಾರಿಸುವ ; ಅಥವಾ

(ಗ) ಲೈಸೆನ್ಸ್ ಇಲ್ಲದೆ ಕೀಟನಾಶಕವನ್ನು ತಯಾರಿಸುವ, ಮಾರಾಟ ಮಾಡುವ, ದಾಸ್ತಾನು ಮಾಡುವ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸುವ ಅಥವಾ ವಿತರಣೆ ಮಾಡುವ ; ಅಥವಾ

(ಘ) 27ನೇ ಪ್ರಕರಣವನ್ನು ಉಲ್ಲಂಘಿಸಿ ಕೀಟನಾಶಕವನ್ನು ಮಾರಾಟ ಮಾಡುವ ಅಥವಾ ವಿತರಣೆ ಮಾಡುವ; ಅಥವಾ

(ಙ) 27ನೇ ಪ್ರಕರಣದ ಮೇರೆಗೆ ಯಾವ ಕೀಟನಾಶಕದ ಉಪಯೋಗವನ್ನು ನಿಷೇಧಿಸಲಾಗಿದೆಯೋ ಆ ಕೀಟನಾಶಕವನ್ನು ಯಾವನೇ ಕೆಲಸಗಾರನು ಉಪಯೋಗಿಸುವಂತೆ ಮಾಡುವ; ಅಥವಾ

(ಚ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಕೀಟನಾಶಕ ಪರಿಶೀಲಕನು ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಡ್ಡಿ ಪಡಿಸುವ,

—ಯಾವನೇ ಆಗಲಿ,

(i) ಮೊದಲನೆ ಅಪರಾಧಕ್ಕೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ;

(ii) ಎರಡನೆಯ ಮತ್ತು ತರುವಾಯದ ಅಪರಾಧಕ್ಕೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ,

—ದಂಡನೀಯನಾಗತಕ್ಕದು.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಕೀಟನಾಶಕವನ್ನು ಉಪಯೋಗಿಸುವ ಯಾವನೇ ಆಗಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

(3) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಇತರ ಉಪಬಂಧವನ್ನು ಅಥವಾ ಅದರ ಮೇರೆಗೆ ಮಂಜೂರು ಮಾಡಿದ ನೋಂದಣಿ ಪ್ರಮಾಣ ಪತ್ರದ ಅಥವಾ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸುವ ಯಾವನೇ ಆಗಲಿ,—

(i) ಮೊದಲ ಅಪರಾಧಕ್ಕೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;

(ii) ಎರಡನೆಯ ಮತ್ತು ಆ ತರುವಾಯದ ಅಪರಾಧಕ್ಕೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ,

—ದಂಡನೀಯನಾಗತಕ್ಕದು.

